ನಿಮ್ಮ ನಂಬಿಕೆಯ ಧ್ವನಿ
# ಧೈರ್ಯದ ದಾರಿ
DAIRYADA DAARI NEWS PAPER
EMAIL : dairyadadaari@gmail.com ಸಂಪುಟ: 01 ಸಂಚಿಕೆ: 103
ಬೆಲೆ ರೂ : 2.00
ರಾಯಚೂರು
ಪುಟ: 4
ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793
KANNADA DAILY NEWS PAPER
ಕನ್ನಡ ದಿನಪತ್ರಿಕೆ
DAIRYADA DAARI
RNI NO: KNKAN/25/A2795 ಭಾನುವಾರ: 29-03-2026

## ಹಿಂದಿ ಭಾಷೆ ಹೇರಿಕೆ ವಿಮೋಚನೆ : ಕನ್ನಡಿಗರ ಸಂಭ್ರಮ, ಸಚಿವ ಮಧು ಬಂಗಾರಪ್ಪಗೆ ಸನ್ಮಾನ



**ಬೆಂಗಳೂರು, ಮಾ.2–** ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆ ಹಿಂದಿ ಉತ್ತೀರ್ಣ ವಾಗುವುದು ಕಡ್ಡಾಯವಲ್ಲ ಎಂಬ ಗ್ರೆಡಿಂಗ್ ವ್ಯವಸ್ಥೆ ಜಾರಿಯಾಗಿರುವುದಕ್ಕೆ ರಾಜ್ಯಾದ್ಯಂತ ಸಂಭ್ರಮ ಮನೆ ಮಾಡಿದೆ. ಬೆಂಗಳೂರು ಸೇರಿದಂತೆ ನಾಡಿನಾದ್ಯಂತ ಕನ್ನಡ ಪರ ಸಂಘಟನೆಗಳು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದ್ದಾರೆ.

ಸಾಹಿತಿಗಳು, ಕನ್ನಡಪರ ಸಂಘಟನೆಗಳು, ಶಿಕ್ಷಣ ತಜ್ಞರು ಸರ್ಕಾರದ ನಿರ್ಧಾರವನ್ನು ಸ್ವಾಗತಿಸಿದ್ದು, ಮಕ್ಕಳ ಮೇಲೆ ಹಿಂದಿ ಭಾಷಾ ಹೇರಿಕೆಯ ಒತ್ತಡದಿಂದ ವಿಮೋಚನೆ ದೊರೆತಿದೆ ಎಂದು ಶ್ಲಾಘಿಸಿದ್ದಾರೆ.ಇದೇ ವೇಳೆ ತಮಿಳು ನಾಡು, ಮಹಾರಾಷ್ಟ್ರ, ಕೇರಳ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಇರುವಂತೆ ಕರ್ನಾಟಕದಲ್ಲೂ ದ್ವಿಭಾಷಾ ಪದ್ಧತಿಯನ್ನು ಜಾರಿಗೆ ತರಬೇಕು ಎಂಬ ಒತ್ತಡ ಕೇಳಿ ಬರುತ್ತಿದೆ. ಆರಂಭದಿಂದಲೂ ಹಿಂದಿ ಭಾಷಾ ಹೇರಿಕೆಯನ್ನು ದಕ್ಷಿಣ ಭಾರತ ರಾಜ್ಯಗಳು ವಿರೋಧಿಸುತ್ತಲೇ ಬಂದಿವೆ.

ಪ್ರಾದೇಶಿಕ ಭಾಷೆಗಳನ್ನು ಮೂಲೆ ಗುಂಪು ಮಾಡಿ ಹಿಂದು ಜನಜೀವನವನ್ನು ಆಕ್ರಮಿಸಿಕೊಳ್ಳುತ್ತಿದೆ. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದಲ್ಲಿನ ಭಾಷಾ ಮಾಧ್ಯಮದ ಗೊಂದಲ ವಿದ್ಯಾರ್ಥಿಗಳನ್ನು ಹೈರಾಣಾಗಿಸಿತ್ತು. ಮಾತೃಭಾಷೆ ಕನ್ನಡ ಹೃದಯದ ಭಾವನೆ ವ್ಯಕ್ತ ಪಡಿಸಲು ಸಮರ್ಥವಾಗಿದ್ದರೆ, ವ್ಯಾವಹಾರಿಕವಾಗಿ ಇಂಗ್ಲಿಷ್ ಅನಿವಾರ್ಯ ಎಂಬ ಪರಿಸ್ಥಿತಿ ಇದೆ. ಈ ನಡುವೆ ಹಿಂದಿ ಕಲಿಕೆಗೂ ಅವಕಾಶ ಇತ್ತು. ಆದರೆ ಇತ್ತಿಚಿನ ದಿನಗಳಲ್ಲಿ ಹಿಂದಿ ಭಾಷಾ ಪರೀಕ್ಷೆಯಲ್ಲೂ ಶೇ.35ರಷ್ಟು ಅಂಕಗಳಿಸಬೇಕು ಎಂಬ ನಿಯಮ ಇತ್ತು. ಅದಕ್ಕೆ ಸರ್ಕಾರ ಮುಕ್ತಿ ನೀಡಿದೆ.

ಸಹಜವಾಗಿಯೇ ವಿದ್ಯಾರ್ಥಿ ವರ್ಗ ಖುಷಿಯಲ್ಲಿದ್ದರೆ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣದಲ್ಲಿ ಹಿಂದಿ ಕಲಿಕೆಯ ಒತ್ತಡವನ್ನು ತಗ್ಗಿಸುವ ಮೂಲಕ ಕನ್ನಡ ಕಲಿಕೆಗೆ ಆದ್ಯತೆ ನೀಡಿದ್ದಕ್ಕಾಗಿ ಸಂಘಟನೆಗಳು ಸರ್ಕಾರವನ್ನು ಅಭಿನಂದಿಸಿವೆ.ಕನ್ನಡ ಪರ ಸಂಘಟನೆಗಳು ಇಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರ ಮನೆಯ ಬಳಿ ಹೋಗಿ ಅಭಿನಂದನೆ ಸಲ್ಲಿಸಿ, ಸಂಭ್ರಮ ಆಚರಿಸಿವೆ.ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಮಧು ಬಂಗಾರಪ್ಪ, ಬಿಜೆಪಿಯವರಿಗೆ ಧೈರ್ಯವಿದ್ದರೆ ಹಿಂದಿಯನ್ನು ರಾಷ್ಟ್ರಭಾಷೆ ಎಂದು ಘೋಷಣೆ ಮಾಡಿಸಲಿ ಎಂದು ಸವಾಲು ಹಾಕಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಕ್ಕಳ ಹಿತದೃಷ್ಟಿಯಿಂದ ತೀರ್ಮಾನ ತೆಗೆದುಕೊಳ್ಳುವಂತೆ ಸೂಚಿಸಿದ್ದರು. 2ನೇಪುಟಕ್ಕೆ

## ಲೊಯೋಲ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವಿಶೇಷ ಶಿಬಿರ



ಧೈರ್ಯದ ದಾರಿ

**ಮಾನ್ವಿ:** ಸಿಂಧನೂರು ತಾಲೂಕಿನ ಹಲ್ಲುಗಂಚಿ ಗ್ರಾಮದಲ್ಲಿ ಲೊಯೋಲ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ಆಯೋಜಿಸಲಾದ ವಾರ್ಷಿಕ ವಿಶೇಷ ಸಪ್ತಾಹ ಶಿಬಿರವನ್ನು ಉದ್ಘಾಟಿಸಿ ಲೊಯೋಲ ಅರೋಗ್ಯ ಕೇಂದ್ರದ ನಿರ್ದೇಶಕರಾದ ಸಿಸ್ಟರ್ ಲೀನಾ ಪಾಯಸ್ ಮಾತನಾಡಿ ಜಾತಿ, ಮತ, ಪಂಥಗಳ ಬೇಧವಿಲ್ಲದೆ ಎಲ್ಲರೂ ಒಂದೇ ಎಂಬ ರಾಷ್ಟ್ರೀಯ ಭಾವೈಕ್ಯತೆಯನ್ನು ಯುವಜನತೆಯಲ್ಲಿ ಬಿತ್ತಲು ಮತ್ತು ಸೇವಾ ಮನೋಭಾವ ಬೆಳೆಸಿಕೊಳ್ಳಲು ಎನ್. ಎಸ್. ಎಸ್ ತುಂಬಾ ಸಹಕಾರಿಯಾಗಿದೆ ವಿದ್ಯಾರ್ಥಿಗಳಲ್ಲಿ ಪರಿಸರ ಪ್ರೇಮ, ಸ್ವಚ್ಛತೆ, ನಾಯಕತ್ವದ ಗುಣಗಳನ್ನು ಬೆಳೆಸುವುದು ಮತ್ತು ಅವರ ವ್ಯಕ್ತಿತ್ವವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವುದು ಈ ಕಾರ್ಯಕ್ರಮದ ಮುಖ್ಯ ಗುರಿಯಾಗಿದೆ. ಹಾಗಾಗಿ ವಿದ್ಯಾರ್ಥಿಗಳು ತಾವು ವಾಸಿಸುವ ಅಥವಾ ಕಲಿಯುವ ಪರಿಸರದ ಜನರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವುಗಳಿಗೆ ಪರಿಹಾರ ಕಂಡುಕೊಳ್ಳಲು ಸೂಕ್ತ 2ನೇಪುಟಕ್ಕೆ

## ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಕಾನೂನು ಅರಿವು ಹಾಗೂ ನೆರವು ಕಾರ್ಯಕ್ರಮ




ಧೈರ್ಯದ ದಾರಿ

**ಮಾನ್ವಿ :** ಪಟ್ಟಣದ ಶಾರದಾ ವಿದ್ಯಾನಿಕೇತನ ಶಿಕ್ಷಣ ಮಹಾವಿದ್ಯಾಲಯದ ಸಭಾಂಗಣದಲ್ಲಿ ಶಾರದಾ ವಿದ್ಯಾನಿಕೇತನ ಶಿಕ್ಷಣ ಮಹಾವಿದ್ಯಾಲಯ ಹಾಗೂ ತಾಲೂಕ ಕಾನೂನು ಸೇವಾ ಸಮಿತಿ ಸಂಯುಕ್ತಾಶ್ರಯದಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಕಾನೂನು ಅರಿವು ಹಾಗೂ ನೆರವು ಕಾರ್ಯಕ್ರಮವನ್ನು ನ್ಯಾಯವಾದಿಗಳಾದ ಶ್ರೀದೇವಿ ಬಳಿಗಾರ ಉದ್ಘಾಟಿಸಿ ಮಾತನಾಡಿ ಸಂವಿಧಾನದಲ್ಲಿ ಕೌಟುಂಬಿಕ ದೌರ್ಜನ್ಯ ಕಾಯ್ದೆಗಳು , ವರದಕ್ಷಿಣೆ ಕಾಯ್ದೆಗಳು, ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ಕಿರುಕುಳ ಸೇರಿದಂತೆ ಮಹಿಳೆಯರ ರಕ್ಷಣೆಗಾಗಿ ಅನೇಕ ಹಕ್ಕು ಮತ್ತು ಕಾನೂನುಗಳನ್ನು ನೀಡಲಾಗಿದ್ದರು ಕೂಡ ಮಹಿಳೆಯರು ಜಾಗೃತರಾಗದೆ ಇರುವುದರಿಂದ ಮಹಿಳಾ ಕಾನೂನುಗಳ ದುರ್ಬಳಕೆಯನ್ನು ಕಾಣಬಹುದಾಗಿದೆ. ಎಂದು ತಿಳಿಸಿದರು.

ಕಾಲೇಜಿನ ಉಪಪ್ರಚಾರ್ಯರಾದ ವೀರಭದ್ರಯ್ಯ ಹಿರೇಮಠ, ಮಕ್ಕಳ ತಜ್ಞ ವೈದ್ಯರಾದ ಡಾ. ಕಾವ್ಯ, ಮಂಜುಳಾ ಕಿಶೋರ್ ಕುಮಾರ, ಶಾರದಾ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯಾದ ಕು. ಡಾ.ಹೈಂದವಿ ಮಧುಸೂದನ್ ಗುಪ್ತಾಜೀ, ಶಾರದಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಉಮಾಮಹೇಶ್ವರಿ ಮದುಸೂಧನ ಗುಪ್ತಾಜಿ, ಕಾಲೇಜಿನ ವಿದ್ಯಾರ್ಥಿ ಸಂಘದ ನಾಯಕಿ ವರ್ಷಿತಾ, ಪ್ರಶಿಕ್ಷಣಾರ್ಥಿಗಳಾದ ಪ್ರಿಯದರ್ಶಿನಿ ಹಾಗೂ ಬಂಡೆಮ್ಮ ,ಲಲಿತಾ ,ವನಿತಾ,ಅಂಬಿಕಾ ಇದ್ದರು.

## ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿ ಬೆಳವಣಿಗೆಗೆ ದತಿದಾನ ಅವಶ್ಯಕ : ಶಿವರಾಜನಾಯಕ ಸಾಹುಕಾರ.



ಧೈರ್ಯದ ದಾರಿ

**ಮಾನ್ವಿ.:** ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಭಾಷೆಯ ಬೆಳವಣಿಗೆಗಾಗಿ ದಾನಿಗಳು ನೀಡುವ ಧನಸಹಾಯದ ಮೂಲಕ ಅನೇಕ ದತ್ತಿ ಕಾರ್ಯಕ್ರಮಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ವರ್ಷಾಂತ್ಯದವರಗೆ ಆಯೋಜಿಸುತ್ತದೆ ಎಂದು ಶಾಸಕರ ಪುತ್ರ ಶಿವರಾಜನಾಯಕ ಸಾಹುಕಾರ ಹೇಳಿದರು.

ಪಟ್ಟಣದ ಕಳಿಂಗ ಕಾಲೇಜಿನಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ರಾಯಚೂರು, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಮಾನ್ವಿ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಮುಖ ವಾರ್ಷಿಕ ಕಾರ್ಯಕ್ರಮಗಳಿಗೆ ಮೂಲಾಧಾರವೆಂದರೆ ದತ್ತಿನಿಧಿಗಳು. ಈ ದತ್ತಿನಿಧಿಯನ್ನು ದತ್ತಿದಾನಿಗಳು ತಮ್ಮ ಹಿರಿಯರ ನೆನಪಿಗೆ ಅಥವಾ ತಮಗೆ ಉಪಕಾರ ಮಾಡಿದವರ ವಾರ್ಷಿಕ ಸ್ಮರಣೆಗೆ ಅಥವಾ ನಾಡು ನುಡಿಗಳ ಬಗ್ಗೆ ಈ ರೀತಿಯ ಕಾರ್ಯಕ್ರಮಗಳನ್ನು ನಡೆಸಬೇಕೆಂಬ ತಮ್ಮ ಆಶಯವಿದ್ದಂತೆ ಪರಿಷತ್ತಿನ ಸದಸ್ಯರು, ಹಿತೈಷಿಗಳು, ಸಾರ್ವಜನಿಕ ಗಣ್ಯರು, ಸಂಸ್ಥೆಗಳು ಶಾಶ್ವತ ಠೇವಣಿಯನ್ನು ಇಟ್ಟು ತಾವು ತಿಳಿಸಿದ ಪ್ರಕಾರ ಕಾರ್ಯಕ್ರಮಗಳನ್ನು ನಡೆಸಲು ವ್ಯವಸ್ಥೆ ಮಾಡುವುದು. ಹೀಗೆ ಪ್ರತಿವರ್ಷ ದತ್ತಿದಾನಿಗಳ ಆಶಯದಂತೆ ಕಾರ್ಯಕ್ರಮಗಳನ್ನು ನಡೆಸುವುದು ದತ್ತಿ ಉಪನ್ಯಾಸ ಕಾರ್ಯಕ್ರಮವಾಗಿದೆ ಎಂದು ಶಿವರಾಜನಾಯಕ ಸಾಹುಕಾರ ತಿಳಿಸಿದರು. ಮಾನ್ವಿ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದಾಗಿನಿಂದ ಶರಣಬಸವ ನೀರಮಾನ್ವಿ ಅವರು ಎಡಬಿಡದೆ ಕನ್ನಡದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದು 8 ದತ್ತಿಗಳನ್ನು ಸಂಗ್ರಹಿಸಿದ್ದಾರೆ. ಇಂದಿಗೆ ಒಂದು ತಿಂಗಳ (ಫೆ.28) ಹಿಂದೆಯಷ್ಟೇ 11 ನೇ ತಾಲೂಕ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅತ್ಯಂತ ಅದ್ದೂರಿಯಾಗಿ ನಡೆಸಿರುವುದು ತುಂಬಾ ಹೆಮ್ಮೆಯ ಸಂಗತಿ ಎಂದು ಶಿವರಾಜನಾಯಕ ಸಾಹುಕಾರ ಮೆಚ್ಚುಗೆಯ ನುಡಿಗಳನ್ನಾಡಿದರು. 2ನೇಪುಟಕ್ಕೆ

## ಕುರ್ಡಿ ಗ್ರಾಮದ ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದ ಗ್ರಾಮೀಣ ಶಾಸಕ ಬಸವನಗೌಡ ದದ್ದಲ್



**ಮಾನ್ವಿ :** ತಾಲೂಕಿನ ಕುರ್ಡಿ ಗ್ರಾಮಕ್ಕೆ ರಾಯಚೂರು ಗ್ರಾಮೀಣ ಶಾಸಕ ಹಾಗೂ ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಬಸವನಗೌಡ ದದ್ದಲ್ ಭೇಟಿ ನೀಡಿ ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿ ಅಂತ್ಯಸಂಸ್ಕಾರಕ್ಕಾಗಿ ವೈಯುಕ್ತಿಕವಾಗಿ 50 ಸಾವಿರ ನಗದು ನೀಡಿದರು.ಕುರ್ಡಿ ಗ್ರಾಮದ ಒಂದೆ ಕುಟುಂಬದ ಸಂಬಂದಿಗಳು ಆಂಧ್ರಪ್ರದೇಶದಲ್ಲಿನ ಸಮಾರಂಭಕ್ಕೆ ತೆರಳಿದಾಗ ನಡೆದ ದುರ್ಗಟನೆಯಲ್ಲಿ ಮೃತರಾಗಿದ್ದರೆ ಅವರ ಕುಟುಂಬಕ್ಕೆ ದುಖಃವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ತಿಳಿಸಿದರು.ತುಂಗಭದ್ರ ನದಿಯಲ್ಲಿ ಸ್ನಾನ ಮಾಡುವ ಸಮಯದಲ್ಲಿ ಮೃತಪಟ್ಟ ಕುರ್ಡಿ ಗ್ರಾಮದ ಉಮಾವತಿ , ಶಿವಾನಂದ, ಮಹಾಂತೇಶ್ ,ಸುಂಕೇಶ್ವರ ಗ್ರಾಮದ ರತ್ನಮ್ಮರವರ ಮೃತ ದೇಹವನ್ನು ಗ್ರಾಮಕ್ಕೆ ತಂದ ವೇಳೆ ಗ್ರಾಮಸ್ಥರ ಹಾಗೂ ಬಂಧುಗಳ ರೋದನ ಮುಗಿಲು ಮುಟ್ಟಿತ್ತು. ಕಂದಯ ನಿರೀಕ್ಷಕ ರಾದ ಹನುಮಂತನಾಯಕ ಜಲ್ಲಿ , ಮುಖಂಡರಾದ ಸೋಮಶೇ ಖರ ಪಾಟೀಲ್,ಶ್ರೀನಿವಾಸ ಸಾಹುಕರ್, ಮೌನೇಶನಾಯಕ, ಮನೋಜಗೌಡ,ಪ್ರವೀ ಣ,ಮಲ್ಲೇಶ,ಯಂಕೋಬ, ರಮೇಶ, ಮಹಾದೇವನಾಯಕ ಸೇರಿದಂತೆ ಗ್ರಾಮದ ಮುಖಂಡರು ಭಾಗವಹಿಸಿದರು.

## ಶ್ರೀರಾಮಚಂದ್ರ ಹಿಂದೂ ಧರ್ಮದ ಕಿರೀಟ ಹಾಗೂ ಆದರ್ಶಪ್ರಾಯ: ಜೆ. ಶರಣಪ್ಪಗೌಡ




ಧೈರ್ಯದ ದಾರಿ

**ಸಿರವಾರ:** "ಶ್ರೀರಾಮಚಂದ್ರನು ಹಿಂದೂ ಧರ್ಮದ ಕಿರೀಟಪ್ರಾಯನಾಗಿದ್ದು, ಆತನ ಸತ್ಯದ ಹಾದಿ, ಸಮರ್ಥ ಆಡಳಿತ, ಭ್ರಾತೃ ಪ್ರೇಮ ಮತ್ತು ಸತಿನಿಷ್ಠೆ ಇಂದಿಗೂ ಸಮಾಜಕ್ಕೆ ದಾರಿದೀಪವಾಗಿದೆ," ಎಂದು ಹಿರಿಯ ಮುಖಂಡ ಜೆ. ಶರಣಪ್ಪಗೌಡ ಅಭಿಪ್ರಾಯಪಟ್ಟರು.

ಪಟ್ಟಣದ ಬಸ್ ನಿಲ್ದಾಣದ ಮುಂಭಾಗದ ಬಸವ ಕಾಂಪ್ಲೆಕ್ಸ್ ಹತ್ತಿರ ಹಮ್ಮಿಕೊಳ್ಳಲಾಗಿದ್ದ 'ಅಯೋಧ್ಯಾಪತಿ ಶ್ರೀರಾಮಚಂದ್ರನ ಜನ್ಮದಿನೋತ್ಸವ' ಹಾಗೂ 'ಶ್ರೀರಾಮ ನವಮಿ' ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

**ಆದರ್ಶಗಳ ಪಾಲನೆ ಅಗತ್ಯ:** ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಗಣ್ಯರು, ರಾಮನ ಜೀವನದ ಮೌಲ್ಯಗಳನ್ನು ಇಂದಿನ ಪೀಳಿಗೆ ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಅಯ್ಯನಗೌಡ ಏರಡ್ಡಿ, ಜಿ. ಲೋಕರಡ್ಡಿ, ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಸುರೇಶ ಶೆಟ್ಟಿ, ರಮೇಶ ದರ್ಶನಕರ್, ನರಸಿಂಹರಾವ್ ಕುಲಕರ್ಣಿ ಹಾಗೂ ಸುರೇಶ ಹೀರಾ ಅವರು ರಾಮ ನವಮಿಯ ಮಹತ್ವದ ಕುರಿತು ಮಾತನಾಡಿದರು.

**ಪಾನಕ ವಿತರಣೆ:** ಶ್ರೀರಾಮ ನವಮಿಯ ವಿಶೇಷವಾಗಿ ಕಾರ್ಯಕ್ರಮಕ್ಕೆ ಆಗಮಿಸಿದ್ದ ಭಕ್ತಾದಿಗಳಿಗೆ ಹಾಗೂ ಸಾರ್ವಜನಿಕರಿಗೆ ಸಾಂಪ್ರದಾಯಿಕ ಪಾನಕ ಮತ್ತು ಪ್ರಸಾದ ವಿತರಣೆ ಮಾಡಲಾಯಿತು.

**ಗಣ್ಯರ ಉಪಸ್ಥಿತಿ:** ಕಾರ್ಯಕ್ರಮದಲ್ಲಿ ಪ.ಪಂ. ಅಧಿಕಾರಿ ಸುನೀತಾ ಸಜ್ಜನ, ಕೃಷ್ಣಾಜಿರಾವ್ ಸೂರ್ಯವಂಶಿ, ಜೆ. ಬಸವರಾಜ ಪಾಟೀಲ, ಸಂದೀಪ ಪಾಟೀಲ, ಮಾಣಿಕಯ್ಯ ಶೆಟ್ಟಿ, ಎಂ. ನಿಂಬೆಯ್ಯ ಸ್ವಾಮಿ, ಪತ್ತಾರ ನಾಗಪ್ಪ, ಗಣೇಕಲ್ ವೀರೇಶ, ಚಿತಾಪೂರ ಮಂಜುನಾಥ, ಪ್ರಾಣೇಶ ಪುರೋಹಿತ, ಚಂದ್ರಕಾಂತ ಪುರೋಹಿತ, ಕೆ. ಶ್ರೀನಿವಾಸ ಬಸಾಪೂರ, ಶಿಕಂಟಿ ಮಲ್ಲಿಕಾರ್ಜುನ, ಎಂ. ರಾಜೇಶ, ಮಹಾಂತೇಶ ಮಸ್ಕಿ, ಸುಂಕೇಶ್ವರಾಳ ದೇವೇಂದ್ರಪ್ಪ, ಜಿ.ಕೆ. ಭಜಂತ್ರಿ, ಭೀಮಾರಾಮ್ ಪಟೇಲ್, ಧನಸಿಂಗ್, ವಿಪುಲ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## 2.38 ಲಕ್ಷ ಕೋಟಿ ರಕ್ಷಣಾ ಒಪ್ಪಂದಕ್ಕೆ ಕೇಂದ್ರ ಅಸ್ತು

**ನವದೆಹಲಿ,ಮಾ.28–** ದೇಶದ ರಕ್ಷಣಾ ಸಾಮರ್ಥ್ಯ ಬಲಪಡಿಸುವ ನಿಟ್ಟಿನಲ್ಲಿ ಎಸ್–400 ಮತ್ತು ಸು–30 ಎಂಜಿನ್‌ಗಳು ಸೇರಿದಂತೆ ರೂ. 2.38 ಲಕ್ಷ ಕೋಟಿ ರೂ. ರಕ್ಷಣಾ ಒಪ್ಪಂದಗಳಿಗೆ ಕೇಂದ್ರ ಸರ್ಕಾರದ ಅಧೀನದಲ್ಲಿರುವ ರಕ್ಷಣಾ ಸ್ವಾಧೀನ ಮಂಡಳಿ ಅನುಮೋದನೆ ನೀಡಿದೆ. ಎಸ್–400 ದೀರ್ಘ ಶ್ರೇಣಿಯ ಕ್ಷಿಪಣಿ ಮೇಲ್ಮೈಯಿಂದ ಗಾಳಿಗೆ ಚಿಮ್ಮುವ ಕ್ಷಿಪಣಿ ವ್ಯವಸ್ಥೆಯ ಹೆಚ್ಚಿನ ಘಟಕಗಳನ್ನು ಖರೀದಿಸುವುದು ಮತ್ತು ಸುಖೋಯ್ ಸಿ–30 ಏರೋ ಎಂಜಿನ್ ಖರೀದಿಗೆ ಒತ್ತು ನೀಡಲಾಗಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಭಾರತೀಯ ಸಶಸ್ತ್ರ ಪಡೆಗಳನ್ನು ಆಧುನೀಕರಿಸುವ ಉದ್ದೇಶದಿಂದ ರಕ್ಷಣಾ ಸ್ವಾಧೀನ ಮಂಡಳಿ. 2.38 ಲಕ್ಷ ಕೋಟಿ ಮೌಲ್ಯದ ಪ್ರಸ್ತಾವನೆಗಳನ್ನು ಅನುಮೋದನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.ಭಾರತೀಯ ವಾಯುಪಡೆಗೆ ಎಸ್– –400 ದೀರ್ಘ ಶ್ರೇಣಿಯ ಮೇಲ್ಮೈಯಿಂದ ಗಾಳಿಗೆ ಚಿಮ್ಮುವ ಕ್ಷಿಪಣಿ ವ್ಯವಸ್ಥೆ ಖರೀದಿಸಲು, ಸುಖೋಯ್ ಸು–30 ಏರೋ ಎಂಜಿನ್ ಖರೀದಿಗೂ ಒತ್ತು ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.ಜೊತೆಗೆ ಮಧ್ಯಮ ಸಾರಿಗೆ ವಿಮಾನ ಖರೀದಿಸಲು ಸಮ್ಮತಿ ನೀಡಿದೆ. ಕಾರ್ಯತಂತ್ರದ, ಯುದ್ಧತಂತ್ರದ ಮತ್ತು ಕಾರ್ಯಾಚರಣೆಯ ಏಲಿಫ್ಟ್" ಅವಶ್ಯಕತೆಗಳನ್ನು ಪೂರೈಸುವ ಗುರಿ ಹೊಂದಿದೆ.

ಎಸ್–400 ವ್ಯವಸ್ಥೆಯು ಪ್ರಮುಖ ಪ್ರದೇಶ ಗುರಿಯಾಗಿಸಿಕೊಂಡು ಶತ್ರುಗಳ ದೀರ್ಘ–ಶ್ರೇಣಿಯ ವಾಯು ವಾಹಕ ಎದುರಿಸುತ್ತದೆ, ಆದರೆ ರಿಮೋಟ್ಲಿ ಪೈಲಟ್ ಮಾಡಿದ ಸ್ಟ್ರೈಕ್ ಏಕ್ರಾಫ್ಟ್ ಆಕ್ರಮಣಕಾರಿ ಕೌಂಟರ್ ಮತ್ತು ಸಂಘಟಿತ ವಾಯು ಕಾರ್ಯಾಚರಣೆ ಕೈಗೊಳ್ಳಲು ಅನುವು ಮಾಡಿಕೊಡುತ್ತದೆ, ಜೊತೆಗೆ ರಹಸ್ಯ ಗುಪ್ತಚರ, ಕಣ್ಗಾವಲು ಮತ್ತು ಗುರುತಿಸುವಿಕೆ ಚಟುವಟಿಕೆಗಳನ್ನು ಒದಗಿಸುತ್ತದೆ" ಎಂದು ಮೂಲಗಳು ತಿಳಿಸಿವೆ. ಸು–30 ಏರೋ ಎಂಜಿನ್ ಮತ್ತು ಅದರ ಸಮುಚ್ಚಯಗಳ ಕೂಲಂಕುಶ ಪರೀಕ್ಷೆಯು ವಿಮಾನದ ಸೇವಾ ಜೀವನ ಹೆಚ್ಚಿಸುತ್ತದೆ



ಮತ್ತು ವಾಯುಪಡೆಯ ಕಾರ್ಯಾಚರಣೆ ಅಗತ್ಯವನ್ನು ಪೂರೈಸುತ್ತದೆ" ಎಂದು ಮಾಹಿತಿ ನೀಡಲಾಗಿದೆಭಾರತೀಯ ಸೇನೆ, ಭಾರತೀಯ ಕರಾವಳಿ ಕಾವಲು ಪಡೆಯಿಗಾಗಿ ಆಂಅಯ ಅನುಮೋದನೆ ಭಾರತೀಯ ಸೇನೆಗಾಗಿ, ವಾಯು ರಕ್ಷಣಾ ಟ್ರ್ಯಾಕ್ ಮಾಡಲಾದ ವ್ಯವಸ್ಥೆ, ಶಸ್ತ್ರಸಜ್ಜಿತ ಚುಚ್ಚುವ ಟ್ಯಾಂಕ್ ಮದ್ದುಗುಂಡುಗಳು, ಹೆಚ್ಚಿನ ಸಾಮರ್ಥ್ಯದ ರೇಡಿಯೋ ರಿಲೇ, ಧನುಷ್ ಗನ್ ವ್ಯವಸ್ಥೆ ಮತ್ತು ರನ್‌ವೇ ಸ್ವತಂತ್ರ ವೈಮಾನಿಕ ಕಣ್ಗಾವಲು ವ್ಯವಸ್ಥೆಯನ್ನು ಖರೀದಿಸಲು ಕೂಡ ಅನುಮೋದನೆ ನೀಡಿದೆಕರಾವಳಿ ರಕ್ಷಣಾ ಪಡೆಗೆ, ಭಾರೀ ಕಾರ್ಯಾಚರಣಾ ಕುಶನ್ ವಾಹನಕ್ಕಾಗಿ ಅಗತ್ಯತೆಯ ಸ್ವೀಕಾರ ಮಂಜೂರು ಮಾಡಿದೆ, ಬಹುಪಯೋಗಿ ಕಡಲ ಕರಾವಳಿ ಕಾರ್ಯಾಚರಣೆ ಪಾತ್ರಗಳಿಗೆ ಬಳಸಲಾಗುತ್ತದೆ, ಇದರಲ್ಲಿ ಹೈ–ಸ್ಪೀಡ್ ಕರಾವಳಿ ಗಸ್ತು, ವಿಚಕ್ಷಣ, ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಗಳು, ಹಡಗುಗಳಿಗೆ ಸಹಾಯ ಮಾಡುವುದು ಮತ್ತು ಸಿಬ್ಬಂದಿ ಮತ್ತು ಅಂಗಡಿಗಳನ್ನು ಸಾಗಿಸುವುದು ಸೇರಿದಂತೆ ಲಾಜಿಸ್ಟಿಕ್ಸ್ ಸೇರಿವೆ. 2025–26 ರ ಹಣಕಾಸು ವರ್ಷದಲ್ಲಿ ಸುಮಾರು 6.73 ಲಕ್ಷ ರೂ. ಮೌಲ್ಯದ 55 ಪ್ರಸ್ತಾವನೆಗಳಿಗೆ ಅನುಮತಿ ನೀಡಿತ್ತು. ಪ್ರಸಕ್ತ ಹಣಕಾಸು ವರ್ಷದಲ್ಲಿ 2.28 ಲಕ್ಷ ಕೋಟಿ ರೂ. ಮೊತ್ತದ 503 ಪ್ರಸ್ತಾವನೆಗಳಿಗೆ ಬಂಡವಾಳ ಖರೀದಿ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ.

ಮೊದಲನೇ ಪುಟದಿಂದ

# ಲೊಯೋಲ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವಿಶೇಷ ಶಿಬಿರ

ಸಮಯವಿದು. ಇಂತಹ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ತಿಳಿಸಿದರು.
ಲೊಯೋಲ ಕಾಲೇಜಿನ ಉಪ ಪ್ರಾಚಾರ್ಯರಾದ ಖಾಸಿಂ ಸಾಬ್ ಮಾತನಾಡಿ ಸೇವೆಯೇ ಪರಮ ಧರ್ಮ ಎಂಬ ತತ್ವದಡಿ ಕೆಲಸ ಮಾಡುವ ರಾಷ್ಟ್ರೀಯ ಸೇವಾ ಯೋಜನೆಯು ವಿದ್ಯಾರ್ಥಿಗಳನ್ನು ಕೇವಲ ಪದವೀಧರರನ್ನಾಗಿ ಮಾಡದೆ, ಸಮಾಜದ ಜವಾಬ್ದಾರಿಯುತ ನಾಗರಿಕರನ್ನಾಗಿ ರೂಪಿಸುತ್ತದೆ. ಎನ್.ಎಸ್.ಎಸ್ ಸ್ವಯಂ ಸೇವಕರು ಸ್ವಾವಲಂಬನೆ, ಶಿಸ್ತು ಮತ್ತು ಸಮಯ ಪ್ರಜ್ಞೆ ಬೆಳೆಸಿಕೊಂಡು ರಾಷ್ಟ್ರೀಯ ನಾಯಕರ ತತ್ವಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಹೇಳಿದರು.
ಹುಲುಗುಂಚಿ ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಹನುಮಂತಪ್ಪ, ದಲಿತ ಸಂಘರ್ಷ ಸಮಿತಿಯ ಮುಖಂಡರಾದ ಹುಲಿಯಪ್ಪ,ಗ್ರಾಮದ ಹಿರಿಯರಾದ ಯಂಕಪ್ಪ, ದುರ್ಗಪ್ಪ ಸೇರಿದಂತೆ ಕಾಲೇಜಿನ ಉಪನ್ಯಾಸಕರು ಹಾಗೂ ಎನ್. ಎಸ್. ಎಸ್ ಶಿಭಿರಾರ್ಥಿಗಳು ಭಾಗವಹಿಸಿದ್ದರು

# ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿ ಬೆಳವಣಿಗೆಗೆ ದತ್ತಿದಾನ ಅವಶ್ಯಕ : ಶಿವರಾಜನಾಯಕ ಸಾಹುಕಾರ.

ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಿವಿಆರ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಬಿ.ವಿ.ರೆಡ್ಡಿ, ಕಸಾಪ ಕೋಶಾಧ್ಯಕ್ಷ ಹೆಚ್.ಶರ್ಫುದ್ದೀನ್ ಪೋತ್ನಾಳ, ಮಾತನಾಡಿದರು ತಾಕಸಾಪ ಅಧ್ಯಕ್ಷ ಶರಣಬಸವ ನೀರಮಾನ್ವಿ ಪ್ರಾಸ್ತಾವಿಕ ನುಡುಗಳನ್ನಾಡಿದರು. ಹಾಗೂ ಆರ್. ಲಲಿತಮ್ಮ ಹೆಸರಿನಲ್ಲಿ ಎಂ.ಆರ್. ವೆಂಕಯ್ಯಶೆಟ್ಟಿ ನೀಡಿರುವ ದತ್ತಿ ಕನ್ನಡ ಸಾಹಿತ್ಯ ಕುರಿತು ನಿವೃತ್ತ ಮುಖ್ಯೋಪಾಧ್ಯಯನಿ ಮಹಿಮೂದಬೇಗಂ ಉಪನ್ಯಾಸ ನೀಡಿದರು. ದಿ.ಕುಂಬಳೂರು ಆದಮ್ಮ ಈರಣ್ಣ ಸ್ಮಾರಕ ದತ್ತಿ ಪ್ರಶಸ್ತಿ ಹೆಸರಿನಲ್ಲಿ ಕೆ. ವಿಜಯಲಕ್ಷ್ಮೀ ಕೆ.ಇ. ನರಸಿಂಹ ನೀಡಿರುವ ಪ್ರಶಸ್ತಿಯನ್ನು ಸಾಹಿತಿ ಅಂಬಮ್ಮ ಪ್ರತಾಪಸಿಂಗ್ ಇವರಿಗೆ ನೀಡಿ ಗೌರವಿಸಲಾಯಿತು. ಹಾಗೂ ದಿ. ಮನೋರಂಜನ ಹೆಸರಿನಲ್ಲಿ ಚಂದ್ರಶೇಖರ ಸುಟ್ಟಹಟ್ಟಿ ನೀಡಿರುವ ದತ್ತಿ ವಚನ ಸಾಹಿತ್ಯ ಕುರಿತು ಜಿ.ಎಂ. ರಂಗಪ್ಪ ಮೇದಾ ಮಾನ್ವಿ, ದಿ.ರಾಮಚಂದ್ರಪ್ಪ ಹೆಸರಿನಲ್ಲಿ ದತ್ತಿದಾನಿ ಹೆಚ್.ಶರ್ಫುದ್ದೀನ್ ಪೋತ್ನಾಳ ನೀಡಿರುವ ರಾಮಚಂದ್ರಪ್ಪನವರ ಕುರಿತು ಮೂಕಪ್ಪ ಕಟ್ಟಿಮನಿ ನಿವೃತ್ತ ಮುಖ್ಯೋಪಾಧ್ಯಾಯರು ಉಪನ್ಯಾಸ ನೀಡಿದರು. ಪ್ರಥ ಮದರ್ಜೆ ಗುತ್ತೇದಾರ ಎಂ.ಮಲ್ಲಿಕಾರ್ಜುನಗೌಡ ಪೋತ್ನಾಳ ಅವರು ತಮ್ಮ ತಂದೆ ಮರಿಲಿಂಗಣ್ಣಗೌಡ ಸ್ಮಾರಕ ದತ್ತಿಯನ್ನು ನೀಡಿದರು.
ಈ ಕಾರ್ಯಕ್ರಮದಲ್ಲಿ ಎಂ.ಮಲ್ಲಿಕಾರ್ಜುನಗೌಡ ಪೋತ್ನಾಳ, ದತ್ತಾತ್ರೇಯ ಮೇಟಿ ಕಳಿಂಗ ಕಾಲೇಜಿನ ಆಡಳಿತಾಧಿಕಾರಿ, ಚಂದ್ರಶೇಖರ ಸುಟ್ಟಹಟ್ಟಿ, ಉಪನ್ಯಾಸಕಿ ಲಾವಣ್ಯ, ಲಕ್ಷ್ಮಣ ಜಾನೇಕಲ್ ಗೌರವ ಕಾರ್ಯದರ್ಶಿ, ಹನುಮಂತ ಕೊಟ್ನೆಕಲ್, ಅಧ್ಯಕ್ಷರು ಹೋಬಳಿ ಘಟಕ, ಮೂಕಪ್ಪ ಕಟ್ಟಿಮನಿ, ಸೈಯ್ಯದ್ ಹುಸೇನ್ ಸಾಹೇಬ್, ಅಂಬಮ್ಮ ಪ್ರತಾಪಸಿಂಗ್, ಡಾ.ಚನ್ನಬಸವ ಮಾಡಗಿರಿ, ಡಾ.ಬಸವರಾಜ ಸುಂಕೇಶ್ವರ ಸೇರಿದಂತೆ ಇನ್ನಿತರರಿದ್ದರು. ಲಕ್ಷ್ಮಣ್ ಜಾನೇಕಲ್ ಸ್ವಾಗತಿಸಿದರು ಡಾ.ಬಸವರಾಜ ಸುಂಕೇಶ್ವರ ನಿರೂಪಿಸಿದರು ಡಾ.ಚನ್ನಬಸವ ಮಾಡಗಿರಿ ವಂದಿಸಿದರು.

# ಹಿಂದಿ ಭಾಷೆ ಹೇರಿಕೆ ವಿಮೋಚನೆ : ಕನ್ನಡಿಗರ ಸಂಭ್ರಮ, ಸಚಿವ ಮಧು ಬಂಗಾರಪ್ಪಗೆ ಸನ್ಮಾನ

ನಮ ಪೂರ್ವಿಕರು ನೆಲ, ಜಲ, ಭಾಷೆಯ ಹಿತರಕ್ಷಣೆಗಾಗಿ ಶ್ರಮಿಸಿದರು. ಗೋಕಾಕ್ ಚಳವಳಿ ಯಾವ ಕಾರಣಕ್ಕೆ ನಡೆದಿತ್ತು ಎಂದು ಗೊತ್ತಿಲ್ಲವೇ ? ಕರ್ನಾಟಕದಲ್ಲಿ ಕನ್ನಡದ ಉಳಿವಿಗಾಗಿ ಹೋರಾಟ ಮಾಡಬೇಕಾದ ಪರಿಸ್ಥಿತಿ ಇರುವುದು ದುರ್ದೈವ ಎಂದು ವಿಷಾದಿಸಿದರು.ಹಿಂದಿ ಕಲಿಯಬಾರದು ಎಂದು ನಾವು ನಿರ್ಧಾರ ಮಾಡಿಲ್ಲ. ಕನ್ನಡಕ್ಕೆ ಆದ್ಯತೆ ನೀಡಿದ್ದೇವೆ. ದೇಶದಲ್ಲಿ ಸಾವಿರಾರು ಭಾಷೆಗಳಿವೆ. ಮಕ್ಕಳು ಯಾವ ಭಾಷೆಯನ್ನಾದರೂ ಓದಲು ಸ್ವತಂತ್ರರಿದ್ದಾರೆ ಎಂದು ಹೇಳಿದರು.

ಒಂದನೇ ತರಗತಿಯ ಪ್ರವೇಶಕ್ಕಾಗಿ 60 ದಿನಗಳ ವಯೋಮಿತಿ ಸಡಿಲಿಕ್ಕೆ ಮಾಡಲಾಗಿದೆ. ಅದನ್ನು 90 ದಿನಗಳಿಗೆ ಹೆಚ್ಚಿಸಬೇಕು ಎಂದು ಒತ್ತಡ ಹೇರುತ್ತಿರುವುದು ಸರಿಯಲ್ಲ. ಚಿಕ್ಕವಯಸ್ಸಿನಮಕ್ಕಳನ್ನು ಮನೆಯಲ್ಲಿ ಇಟ್ಟುಕೊಂಡು ಮುದ್ದಾಡಲಿ. ಹುಟ್ಟಿದ ತಕ್ಷಣವೇ ಶಾಲೆಗೆ ಸೇರಿಸಬೇಕು ಎಂಬ ಮನೋಭಾವನೆ ಬದಲಾಗಬೇಕು ಎಂದರು.ಸರ್ಕಾರ ಈಗಾಗಲೇ ನಿರ್ಧಾರ ತೆಗೆದುಕೊಂಡಿದೆ. ಮುಂದೆ ಕೂಡ ಈ ಬೇಡಿಕೆ ಸಲುವಾಗಿ ಚರ್ಚೆ ಅನಗತ್ಯ. 9 ತಿಂಗಳಿಗೆ ವಯೋಮಿತಿಯನ್ನು ಹೆಚ್ಚಿಸದಿದ್ದರೆ ರಾಜ್ಯದಲ್ಲಿ 75 ಸಾವಿರ ಮಕ್ಕಳಿಗೆ ಅನ್ಯಾಯವಾಗಲಿದೆ ಎಂಬುದು ಆಧಾರ ರಹಿತ. ಚಿಕ್ಕವಯಸ್ಸಿನ ಮಕ್ಕಳ ಸಂಖ್ಯೆಯೇ ಅಷ್ಟಿಲ್ಲ. 75 ಸಾವಿರ ಮಕ್ಕಳಿಗೆ ಅನ್ಯಾಯವಾಗಲಿದೆ ಎಂಬುದೇ ಅವೈಜ್ಞಾನಿಕವಾದ ಮತ್ತು ಖಂಡನೀಯ ವಾದವಾಗಿದೆ ಎಂದರು.

ಬೇಕಾದಂತೆಲ್ಲ ಮನಸೋ ಇಚ್ಛೆ ಕಾನೂನು ಮಾಡಲಾಗುವುದಿಲ್ಲ. ಸರ್ವರ ಹಿತದೃಷ್ಟಿ ಗಮನದಲ್ಲಿಟ್ಟುಕೊಂಡು ನಿರ್ಧಾರ ತೆಗೆದುಕೊಂಡಿದ್ದೇವೆ. ಈಗ ನನ್ನ ವಿರುದ್ಧ ಟೀಕೆ ಮಾಡುತ್ತಿರುವ ಬಿಜೆಪಿಯವರು 2020ರಲ್ಲಿ ಆಡಳಿತದಲ್ಲಿದ್ದಾಗ ಮಾಡಿದ್ಧ ತೀರ್ಮಾನವನ್ನೆ? ನಾವು ಜಾರಿ ಮಾಡುತ್ತಿದ್ದೇವೆ ಎಂದರು.ಕೇಂದ್ರ ಸರ್ಕಾರ ಕರ್ನಾಟಕದಿಂದ ವ್ಯಾಪಕ ಸಂಪನೂಲಗಳನ್ನು ಸಂಗ್ರಹಿಸುತ್ತಿದೆ. ಆದರೆ ನ್ಯಾಯಯುತವಾದ ಬೇಡಿಕೆಗಳಿಗೆ ಸ್ಪಂದಿಸುತ್ತಿಲ್ಲ ಎಂದರು.ಹಿಂದಿ ಭಾಷೆಯ ಗ್ರೆ?ಡಿಂಗ್ ಗಾಗಿ ಬಹಳ ದಿನಗಳಿಂದ ಬೇಡಿಕೆ ಇತ್ತು. ಯಾವುದೇ ತೀರ್ಮಾನ ತೆಗೆದುಕೊಂಡಾಗ ಮಕ್ಕಳ ಫಲಿತಾಂಶದ ಮೇಲೆ ಮತ್ತು ಕಲಿಕೆಯ ಮೇಲೆ ಪರಿಣಾಮ ಬೀರಬಾರದು ಎಂಬ ಕಾರಣಕ್ಕಾಗಿ ಅಳೆದು ತೂಗಿ ಅಂತಿಮ ನಿರ್ಧಾರ ತೆಗೆದುಕೊಂಡಿದ್ದೇವೆ. ಸರ್ಕಾರದ ನಿರ್ಧಾರವನ್ನು ಹೋರಾಟಗಾರರು, ಸಾಹಿತಿಗಳು ಸ್ವಾಗತಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದು, ಚರ್ಚೆ ನಡೆಸಿದ ಬಳಿಕವೇ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಸ್ಪಷ್ಟ ಪಡಿಸಿದರು.

ಕನ್ನಡಪರ ಸಂಘಟನೆಗಳ ಒತ್ತಡಕ್ಕೆ ಮಣಿದು ಸರ್ಕಾರ ನಿರ್ಧಾರ ತೆಗೆದುಕೊಂಡಿದೆ ಎಂದು ಬಿಜೆಪಿಯ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಶಾಸಕ ಎಸ್.ಸುರೇಶ್ ಕುಮಾರ್ ಟೀಕೆ ಮಾಡಿದ್ದಾರೆ. ಹಾಗಿದ್ದ ಮೇಲೆ ಅವರು ಅಧಿಕಾರದಲ್ಲಿದ್ದಾಗ ಕನ್ನಡ ಭಾಷೆಯನ್ನು ಹಾಳು ಮಾಡಬೇಕು ಎಂದೇ ನಿರ್ಧಾರ ಮಾಡಿದ್ದರೇ? ಎಂದು ಪ್ರಶ್ನಿಸಿದ್ದರು. ಬಿ.ಎಸ್.ಯಡಿಯೂರಪ್ಪ ಅವರಿಗೆ ಇರುವ ಕನ್ನಡ ಅಭಿಮಾನ ಬಿ.ವೈ.ವಿಜಯೇಂದ್ರ ಅವರಿಗೆ ಇಲ್ಲ ಎಂದು ಲೇವಡಿ ಮಾಡಿದರು.
ತಮಿಳುನಾಡಿನಲ್ಲಿ ದ್ವಿಭಾಷಾ ನೀತಿ ಇದೆ. ವಿಜಯೇಂದ್ರ ಅವರು ತಿಳಿವಳಿಕೆ ಇಲ್ಲದೆ ಟೀಕೆ ಮಾಡುತ್ತಿದ್ದಾರೆ. ಅನಗತ್ಯ ಟೀಕೆ ಮಾಡುವ ಬದಲಿಗೆ, ದೆಹಲಿಗೆ ಹೋಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಅವರ ಮೇಲೆ ಒತ್ತಡ ಹೇರಿ ರಾಜ್ಯಕ್ಕೆ ತೆರಿಗೆಯಲ್ಲಿ ಬರಬೇಕಾದ ನ್ಯಾಯಯುತ ಪಾಲನ್ನು ಕೊಡಿಸಲಿ ಎಂದು ಹೇಳಿದರು.
ವಿಜಯೇಂದ್ರ ಅವರು ಕೇಂದ್ರ ಸರ್ಕಾರ ತೆರಿಗೆಯಲ್ಲಿ ನ್ಯಾಯಯುತ ಪಾಲು ಕೊಡಲಿ ಎಂದು ತಮ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಲಿ. ನರೇಂದ್ರ ಮೋದಿ ಅವರಿಗೆ ಮೊಬೈಲ್ ಎಂದರೆ ಬಹಳ ಪ್ರಿತಿ , ಅದನ್ನು ನೋಡಿ ಮೋದಿ ನಿರ್ಧಾರ ತೆಗೆದುಕೊಳ್ಳಬಹುದು ಎಂದರು.
ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಗೆ ಹೋಗಿ ನಿರ್ಮಲಾ ಸೀತಾರಾಮನ್ ಅವರ ಬಳಿ ಚರ್ಚೆ ಮಾಡಿದ ಬಳಿಕ, ಈ ಹಿಂದೆ ಕೊಡುತ್ತಿದ್ದ ಅನುದಾನವನ್ನು ಕಡಿತ ಮಾಡಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು.

ಮಕ್ಕಳಿಗೆ ಶೈಕ್ಷಣಿಕವಾಗಿ ಒತ್ತಡವಾಗಬಾರದು ಎಂಬ ಕಾರಣಕ್ಕಾಗಿ ಗ್ರೆಡಿಂಗ್ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ದ್ವಿಭಾಷಾ ನೀತಿಗೆ ಸಂಬಂಧಪಟ್ಟಂತೆ ಸುದೀರ್ಘ ಚರ್ಚೆ ಆಗಬೇಕು. ಏಕಾಏಕಿ ತೀರ್ಮಾನ ತೆಗೆದುಕೊಳ್ಳಲಾಗುವುದಿಲ್ಲ ಎಂದು ಹೇಳಿದರು. ಮಧುಬಂಗಾರಪ್ಪ ಅವರ ಅವಧಿಯಲ್ಲೆ? ದ್ವಿಭಾಷಾ ನೀತಿ ಜಾರಿಯಾಗಬಹುದೇ ಎಂದು ಪ್ರಶ್ನಿಸಿದಾಗ, ನಾಳೆ ನನ್ನನ್ನು ಸಚಿವ ಸ್ಥಾನದಿಂದ ತೆಗೆದರೆ ನಾನು ಏನು ಮಾಡಬೇಕು? ಎಂದರು.

**ಹಿಂದಿಗೆ ಗ್ರೆಡಿಂಗ್ ವ್ಯವಸ್ಥೆ :** ಕನ್ನಡಪರ ಸಂಘಟನೆಗಳಿಂದ ಸಚಿವರಿಗೆ ಅಭಿನಂದನೆ
ಬೆಂಗಳೂರು, ಮಾ.28– ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆ ಹಿಂದಿಗೆ ಗ್ರೆಡೀಂಗ್ ವ್ಯವಸ್ಥೆ ಜಾರಿಗೊಳಿಸಿದ ಹಿನ್ನೆಲೆಯಲ್ಲಿ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರ ಮನೆಯ ಮುಂದೆ ಸಂಭ್ರಮಾಚರಣೆ ನಡೆಯಿತು.

ಕರವೇ ಅಧ್ಯಕ್ಷ ನಾರಾಯಣ ಗೌಡ ನೇತೃತ್ವದಲ್ಲಿ ಮುಖಂಡರು, ಕಾರ್ಯಕರ್ತರ ನಿಯೋಗ, ಸಚಿವರ ಮನೆಗೆ ಭೇಟಿ ನೀಡಿ ಐತಿಹಾಸಿಕ ತೀರ್ಮಾನ ತೆಗೆದುಕೊಂಡಿದ್ದಕ್ಕಾಗಿ ಸಚಿವರಿಗೆ ಅಭಿನಂದನೆ ಸಲ್ಲಿಸಿದೆ.

ಹಿಂದಿ ಭಾಷೆ ಪರೀಕ್ಷೆಯಲ್ಲಿ ಉತ್ತಿ?ರ್ಣವಾಗಲೇಬೇಕು ಎಂಬ ಬಲವಂತದ ಹೇರಿಕೆಯಿಂದ ಮಕ್ಕಳಿಗೆ ತೊಂದರೆಯಾಗುತ್ತಿತ್ತು. ಭಾಷೆಯ ದಬ್ಬಾಳಿಕೆಯಿಂದಾಗಿ ಲಕ್ಷಾಂತರ ಮಕ್ಕಳ ಭವಿಷ್ಯ ತೊಂದರೆಗೆ ಒಳಗಾಗುವುದನ್ನು ಸರಕಾರದ ಈ ತೀರ್ಮಾನ ತಪ್ಪಿಸಿದೆ. ಶಾಪಗ್ರಸ್ತ ವ್ಯವಸ್ಥೆಯಿಂದ ವಿಮೋಚನೆಯಾಗಿದೆ. ಮಕ್ಕಳ ಭವಿಷ್ಯ ಉಜ್ವಲವಾಗಲಿದೆ ಎಂದಿದ್ದಾರೆ.

ಬಿಜೆಪಿಯ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇದನ್ನು ಅರ್ಥಮಾಡಿಕೊಳ್ಳಬೇಕು. ಮಹಾರಾಷ್ಟ್ರದಲ್ಲಿ ಬಿಜೆಪಿಯ ಆಡಳಿತವೇ ಇದ್ದರೂ ತ್ರಿಭಾಷಾ–ಸೂತ್ರವನ್ನು ಕೈಬಿಟ್ಟಿದ್ದಾರೆ. ನಮ್ಮಲ್ಲಿ ಬಿಜೆಪಿಯವರು ಗ್ರೆಡಿಂಗ್ ಪದ್ಧತಿಗೆ ವಿರೋಧ ಮಾಡುತ್ತಿರುವುದು ಸರಿಯಲ್ಲ. ರಾಜಕೀಯ ಅಜೆಂಡಕ್ಕಾಗಿ ಮಕ್ಕಳ ಭವಿಷ್ಯದ ಜೊತೆ ಚೆಲ್ಲಾಟವಾಡಬೇಡಿ ಎಂದು ಎಚ್ಚರಿಕೆ ನೀಡಿದರು.

# ಡಾ. ಬಾಬಾಸಾಹೇಬ ಅಂಬೇಡ್ಕರ ಮತ್ತು ಜಗಜೀವನರಾಮ್ ಜಯಂತಿ ಪೂರ್ವಭಾವಿ ಸಭೆ



**ಚನ್ನಮ್ಮನ ಕಿತ್ತೂರು,ಮಾ.28:** ಹಸಿರುಕ್ರಾಂತಿ ಹರಿಕಾರ ಡಾ. ಬಾಬು ಜಗಜೀವನ ರಾಮ್ ಅವರ 119ನೇ ಜನ್ಮ ದಿನಾಚರಣೆ ಏಪ್ರೀಲ್ 5ರಂದು ಮತ್ತು ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ ಅಂಬೇಡ್ಕರರ 135ನೇ ಜಯಂತಿ ಏಪ್ರೀಲ್ 14 ರಂದು ಸಮಾಜ ಕಲ್ಯಾಣ ಹಾಗೂ ತಾಲೂಕಾಡಳಿತ, ತಾಪಂ, ಪಪಂಗಳಿಂದ ಅರ್ಥಪೂರ್ಣವಾಗಿ ವಿಜೃಂಭಣೆಯಿಂದ ಅದ್ದೂರಿಯಾಗಿ ಆಚರಿಸೋಣ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಸಕ್ರೀಯವಾಗಿ ಭಾಗವಹಿಸಬೇಕೆಂದು ತಹಶೀಲ್ದಾರ ಕಲ್ಲನಗೌಡ ಪಾಟೀಲ ತಿಳಿಸಿದರು.

ತಾಲೂಕಾಡಳಿತ ಸೌಧದ ಕಛೇರಿ ನೂತನ ಸಭಾಂಗಣದಲ್ಲಿ ಸಮಾಜ ಕಲ್ಯಾಣ ಇಲಾಖೆ ಹಾಗೂ ತಾಲೂಕಾಡಳಿತ, ತಾಪಂ, ಪಪಂ ಸಂಯುಕ್ತ ಆಶ್ರಯದಲ್ಲಿ ಅಂಬೇಡ್ಕರ ಹಾಗೂ ಬಾಬು ಜಗಜೀವನರಾಮ್ ಅವರ ಜಯಂತೋತ್ಸವದ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ. ಬಿಸಿಲಿನ ತಾಪಮಾನ ಹೆಚ್ಚಿಗೆ ಇರುವುದರಿಂದ ಎಲ್ಲರೂ ಮುಂಜಾನೆ 8 ಗಂಟೆಗೆ ಸೇರಿ 10 ಗಂಟೆಯೊಳಗಾಗಿ ಪ್ರತಿವರ್ಷದಂತೆ ಚನ್ನಮ್ಮನ ವರ್ತುಳದಿಂದ ಗುರುವಾರ ಪೇಟೆ ಅರಳೀಕಟ್ಟೆ ಮಾರ್ಗವಾಗಿ ಪಪಂವರೆಗೆ ಮೆರವಣಿಗೆ ಅಂತ್ಯಗೊಳಿಸಬೇಕೆಂದು ಸೂಚಿಸಿದರು. ಸರ್ಕಾರ ನಿಯಮಾವಳಿ ಪ್ರಕಾರ ಜಯಂತಿ ಆಚರಿಸಲಾಗುವುದು. ಆಯಾ ಇಲಾಖಾ ಅಧಿಕಾರಿಗಳಿಗೆ ಒಂದೊಂದು ಜವಾಬ್ದಾರಿ ನೀಡಿ ತಾಲೂಕಿನ ಎಲ್ಲ ಶಾಲೆಗಳಲ್ಲಿ ಮುಂಜಾನೆ 8 ಗಂಟೆಗೆ ಜಯಂತಿ ಆಚರಿಸಲು ಸೂಚಿಸಿದರು. ಕುಂಭ ಮೇಳ, ಕರಡಿ ಮಜಲು, ಇನ್ನೂ ಅನೇಕ ಕಲಾ ತಂಡಗಳನ್ನೊಳಗೊಂಡ ಮೆರೆವಣಿಗೆ ಹಮ್ಮಿಕೊಂಡು ಉಭಯ ಮಹಾನಾಯಕರ ಜಯಂತಿಯನ್ನು ಅದ್ದೂರಿಯಾಗಿ ಆಚರಣೆ ಮಾಡಲಾಗುವುದೆಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಪ್ರಾಸ್ತಾವಿಕವಾಗಿ ಮಾತನಾಡಿದ ನಿರ್ದೇಶಕ ಮಲ್ಲಿಕಾರ್ಜುನ ಉಳ್ಳಾಗಡ್ಡಿ ಅಂಬೇಡ್ಕರ ಹಾಗೂ ಬಾಬು ಜಗಜೀವನ್ ರಾಮ್ ಅವರ ಜಯಂತಿಯನ್ನು ಸಡಗರ ಸಂಭ್ರಮದಿಂದ ಆಚರಿಸೋಣ ಕಳೆದ ಎಸ್ಎಸ್ಎಲ್ಸಿ–ಪಿಯುಸಿ ವಾರ್ಷಿಕ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆದ ಸಮಾಜದ ವಿದ್ಯಾರ್ಥಿಗಳಿಗೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನಿಸಲಾಗುವುದು. ಸಾರ್ವಜನಿಕರು ಹಾಗೂ ಮುಖಂಡರು ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಶೋಭೆ ತರವುದು ಅತ್ಯಂತ ಅಗತ್ಯ. ಅಂಬೇಡ್ಕರ ಹಾಗೂ ಬಾಬಾ ಜಗಜೀವನ್ ರಾಮ್ ಅವರ ಜೀವನ, ಸಾಧನೆ, ಸಮಾಜ ಸೇವೆ ಮತ್ತು ಸಮಾನತೆ ಸಂದೇಶಗಳನ್ನು ಪ್ರತಿಯೊಬ್ಬರಿಗೂ ತಲುಪಿಸುವ ಈ ಜಯಂತಿಯ ಉದ್ದೇಶ ಅದಕ್ಕಾಗಿ ಅರ್ಥಪೂರ್ಣವಾಗಿ ಆಚರಿಸೋಣನೆಂದರು. ಕಾರ್ಯಕ್ರಮ ಸ್ಥಳೀಯ ವೀರಭದ್ರೇಶ್ವರ ಕಲ್ಯಾಣ ಮಂಟಪದಲ್ಲಿ ಆಯೋಜಿಸಲು ನಿರ್ಧರಿಸಲಾಯಿತು.

ಈ ಸಭೆಗೆ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹಾಗೂ ಶಾಸಕ ಬಾಬಾಸಾಹೇಬ ಪಾಟೀಲ, ರಾಜಗುರು ಸಂಸ್ಥಾನ ಕಲ್ಮಠ ಮಡಿವಾಳ ರಾಜಯೋಗ್ರೀಂದ್ರ ಸ್ವಾಮಿಜೀ, ನಿಚ್ಚಣಕಿ ಶ್ರೀ ಮಡಿವಾಳೇಶ್ವರ ಮಠದ ಪಂಚಾಕ್ಷರಿ ಸ್ವಾಮಿಜಿ, ಉಪನ್ಯಾಸಕರನ್ನಾಗಿ ಪ್ರೋ. ಮಹೇಶ ಚನ್ನಂಗಿ, ಇವರುಗಳನ್ನು ಜಯಂತಿ ಕಾರ್ಯಕ್ರಮಕ್ಕೆ ಆಹ್ವಾನಿಸಲು ನಿರ್ಧರಿಸಲಾಯಿತು. ಸಾರ್ವಜನಿಕರಿಂದ ವಿವಿಧ ಅಹವಾಲುಗಳು ಕೇಳಿಬಂದವು.

ಈ ವೇಳೆ ಮುಖ್ಯ ಅತಿಥಿಗಳಾಗಿ ಪ್ರಭಾರ ವಿಶೇಷ ತಹಶೀಲ್ದಾರ ಪ್ರಕಾಶ ಕೋರೆ, ತಾಪಂ ಇಓ ನಿಂಗಪ್ಪ ಮಸಳಿ, ಸಿಪಿಐ ಶಿವಾನಂದ ಗುಡಗನಟ್ಟಿ, ಪಪಂ ಮುಖ್ಯಾಧಿಕಾರಿ ಮಲ್ಲಯ್ಯಾ ಹಿರೇಮಠ, ಎಂಕೆ ಹುಬ್ಬಳ್ಳಿ ಪಪಂ ಅಧಿಕಾರಿ, ಮುಖಂಡರುಗಳಾದ ರಾಜು ಜಾಗಂಟಿ, ಫಕ್ಕೀರ ಜಾಗಂಟಿ, ಸುರೇಶ ಜಾಗಂಟಿ, ಶಿವನಂದ ಚನ್ನನ್ನವರ, ಭೀಮಪ್ಪ ದುರಗಣ್ಣವರ, ಬಸವರಾಜ ಕೆಳಗಡೆ, ಮಡಿವಾಳಪ್ಪ ವಕ್ಕುಂದ, ಮಂಜುನಾಥ ಮಣ್ಣವಡ್ಡರ, ಪಿಡಬ್ಲೂಡಿ ಎಇಇ ಸಂಜೀವ ಮಿರಜಕರ, ಆರೋಗ್ಯ, ಪಶು ಇಲಾಖೆ, ಪಪಂ ಎಂಕೆಹುಬ್ಬಳ್ಳಿ, ಸಮಾಜದ ಮುಖಂಡರು, ತಾಲೂಕ ಮಟ್ಟದ ಎಲ್ಲ ಅಧಿಕಾರಿಗಳು, ಸ.ಮಾ.ಇ. ಸಿಬ್ಬಂದಿ ಮಂಜುನಾಥ ಮಕರವಳ್ಳಿ, ಸುರೇಶ ಬೈಲಪ್ಪನವರ, ಮಂಜುನಾಥ ತೊಟಗಿ, ಎಂ ಎಸ್ ಪಾಟೀಲ, ಎಸ್ ಶೀಗಿಹಳ್ಳಿ, ವಿ.ಎಲ್. ನಾಡಗೌಡರ, ತಹಶೀಲ್ದಾರ ಸಿಬ್ಬಂದಿ, ಇನ್ನಿತರರಿದ್ದರು.

# ಒಂದು ದಿನದ ಕಾರ್ಯಾಗಾರ



**ಧಾರವಾಡ,ಮಾ.28:** ಮಹಿಳೆಯರಿಗೆ ಜೀವನದಲ್ಲಿ ಹೊಸ ಅನುಭವಗಳನ್ನು ಪಡೆಯಲು ತಮ್ಮ ಕಂಫರ್ಟ್ ಝೋನ್ ನಿಂದ ಹೊರಬರಬೇಕಾಗಿದೆ. ತಮ್ಮಗೆ ಎದುರಾಗುವ ಸಮಸ್ಯೆಗಳನ್ನು ಒಪ್ಪಿಕೊಳ್ಳದೆ, ಅವುಗಳಿಗೆ ಪರಿಹಾರ ಮಾರ್ಗಗಳನ್ನು ಯೋಚಿಸುವುದು ಅತ್ಯಂತ ಅಗತ್ಯವಿದೆ ಎಂದು ನಂದಿನಿ ಬಿಜ್ಜೂರ್ ಅವರು ಹೇಳಿದರು.


ಅವರು ಶೆಟ್ಟರ್ ಕಾಲೋನಿಯ ಹಕ್ಕೇರಿಕರ್ ನಗರದ ಓಂ ನಿವಾಸದಲ್ಲಿ ಜರುಗಿದ ಅಭ್ಯುದಯ ಫೌಂಡೇಶನ್ ಆಸ್ಥಾ ಮಹಿಳಾ ವೇದಿಕೆಯವರು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಮಹಿಳೆಯರ ಮಧ್ಯ ವಯಸ್ಸಿನ ಸವಾಲುಗಳು ಬಗ್ಗೆ ಮಹಿಳೆಯರಿಗಾಗಿ ಒಂದು ದಿನದ ಕಾರ್ಯಾಗಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.
ಶಿಷ್ಟಾಚಾರದ ಬಾಧ್ಯತೆಯನ್ನು ಗಮನದಲ್ಲಿ ಇಟ್ಟುಕೊಂಡು, ಯಾವತ್ತೂ ಅವರು ಹೀಗೆ, ಇವರು ಹೀಗೆ ಎಂದು ಜಡ್ಜ್ ಂಟ್ ಮಾಡುವುದಕ್ಕೆ ಹೋಗಬಾರದು. ಸಮಾಜದಲ್ಲಿ ಯಾರು ಏನನ್ನು ಹೇಳುತ್ತಾರೆ ಎಂಬುದನ್ನು ತಲೆ ಕೆಡೆಸಿಕೊಳ್ಳದೆ ನಮ್ಮ ಕೆಲಸ ಕಾರ್ಯವನ್ನು ನಾವು ಮುಂದುವರಿಸಬೇಕು. ಮತ್ತು ಮಹಿಳೆಯರು ತಮ್ಮ ಜೀವನದ ನಿರ್ಧಾರಗಳಲ್ಲಿ ಸ್ವತಂತ್ರವಾಗಿರಬೇಕು ಎಂದು ಅವರು ಹೇಳಿದರು.
ಮಹಿಳೆಯರ ಮಧ್ಯಮ ವಯಸ್ಸಿನ ಸಮಸ್ಯೆಗಳನ್ನು ಸಹ ಸಮರ್ಥವಾಗಿ ಎದುರಿಸುವ ಜವಾಬ್ದಾರಿ ಇದ್ದು, ಸಮಸ್ಯೆ ನಡೆದದ್ದರಿಂದ ಜೀವನವೇ ಮುಗಿದಂತಾಗುವುದಿಲ್ಲ, ಬದಲಿಗೆ ಅದರ ಪರಿಹಾರ ಮಾರ್ಗಗಳನ್ನು ಹುಡುಕಬೇಕು. ಆರೋಗ್ಯದ ಮೇಲೂ ಸಮಾನ ಕಾಳಜಿಯನ್ನು ವಹಿಸಬೇಕೆಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ನೃತ್ಯಾದಿ ಡಾನ್ಸ ಅಕಾಡೆಮಿಯ ಅಧ್ಯಕ್ಷೆ ಸುನೀತಾ ದತ್ತವಾಡ್ ಅವರು ಮಾತನಾಡಿದರು.
ಕಾರ್ಯಕ್ರಮದಲ್ಲಿ ಅಸ್ಥಾ ಮಹಿಳಾ ವೇದಿಕೆಯ ಅಧ್ಯಕ್ಷೆ ನಯನಾ ಗಂಗಾಧರ್ ಅವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.
ಕಾರ್ಯಕ್ರಮವನ್ನು ಸಂಗೀತಾ ಗೋವಿಂದರಾಜ ನಿರೂಪಿಸಿ, ವಿಜಯಲಕ್ಷ್ಮಿ ಕಲಾದಗಿ ಅವರು ವಂದಿಸಿದರು.
ಈ ಸಂದರ್ಭದಲ್ಲಿ ಅಭ್ಯುದಯ ಫೌಂಡೇಶನ್ ಆಸ್ಥಾ ಮಹಿಳಾ ವೇದಿಕೆಯ ಮುಖ್ಯಸ್ಥರು ಸದಸ್ಯರು ಸಾರ್ವಜನಿಕರು ಉಪಸ್ಥಿತರಿದ್ದರು.

# 153 ಮಂದಿ ಪೊಲೀಸರಿಗೆ ಮುಖ್ಯಮಂತ್ರಿಗಳ ಪದಕ

**ಬೆಂಗಳೂರು,ಮಾ.28–**ಅಧಿಕಾರಿಗಳು ಸೇರಿದಂತೆ 153 ಮಂದಿ ಪೊಲೀಸ್ ಸಿಬ್ಬಂದಿಗಳು 2025 ನೇ ಸಾಲಿನ ಮುಖ್ಯಮಂತ್ರಿಗಳ ಪದಕಕ್ಕೆ ಭಾಜನರಾಗಿದ್ದಾರೆ. ಈಗಾಗಲೇ ಪ್ರಶಸ್ತಿಗೆ ಭಾಜನರಾಗಿರುವ ಅಧಿಕಾರಿ ಮತ್ತು ಪೊಲೀಸ್ ಸಿಬ್ಬಂದಿಗಳಿಗೆ ಮಾಹಿತಿ ರವಾನಿಸಲಾಗಿದೆ. ಏ.2 ರಂದು ನಡೆಯುವ ಸಮಾರಂಭದಲ್ಲಿ ಮುಖ್ಯಮಂತ್ರಿಗಳ ಪದಕವನ್ನು ಪ್ರದಾನ ಮಾಡಲಾಗುವುದು.

# ಆಟ ಮೈದಾನದಲ್ಲಿ ಆಡಿ ಮೊಬೈಲ್‌ನಲ್ಲಿ ಅಲ್ಲ



–ಮಹಿಬೂಬ್ ಮದ್ಲಾಪುರ
ಸಂಪನ್ಮೂಲ ವ್ಯಕ್ತಿಗಳು ಮಾನ್ವಿ.

ಇಂದಿನ ಆಧುನಿಕ ಯುಗದಲ್ಲಿ ತಂತ್ರಜ್ಞಾನವು ನಮ್ಮ ಜೀವನವನ್ನು ಸುಲಭಗೊಳಿಸಿದೆ. ಆದರೆ ಅದೇ ತಂತ್ರಜ್ಞಾನ, ವಿಶೇಷವಾಗಿ ಮೊಬೈಲ್ ಫೋನ್‌ಗಳು, ಯುವಕರ ಜೀವನ ಶೈಲಿಯಲ್ಲಿ ಅನೇಕ ಬದಲಾವಣೆಗಳನ್ನು ತಂದಿವೆ. ಒಮ್ಮೆ ಮೈದಾನಗಳಲ್ಲಿ ಆಟವಾಡುತ್ತಿದ್ದ ಯುವಕರು ಇಂದು ಮೊಬೈಲ್ ಪರದೆ ಮುಂದೆ ಗಂಟೆಗಳ ಕಾಲ ಕಳೆಯುತ್ತಿರುವುದು ವಿಷಾದನೀಯ ಸಂಗತಿ.

"ಆಟದಲ್ಲಿಲ್ಲದ ಯುವಕ ಕೀಟ ಮುಟ್ಟಿದ ಹಣ್ಣಿನಂತೆ" ಎಂಬ ಮಾತು ಅರ್ಥಪೂರ್ಣವಾಗಿದೆ. ಮನುಷ್ಯನ ಜೀವನದಲ್ಲಿ ಒಂದು ಹವ್ಯಾಸ ಇರಬೇಕು, ಅದರಲ್ಲೂ ಕ್ರೀಡೆಗಳಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಅತ್ಯವಶ್ಯಕ. ಇಲ್ಲದಿದ್ದರೆ ದೇಹವೂ ಮನಸ್ಸೂ ದುರ್ಬಲವಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಒಂದು ವಿಶಿಷ್ಟ ಪ್ರತಿಭೆ ಅಡಗಿರುತ್ತದೆ. ಆ ಪ್ರತಿಭೆಯನ್ನು ಹೊರತೆಗೆಯಲು ಕ್ರೀಡೆಗಳು ಉತ್ತಮ ವೇದಿಕೆಗಳಾಗಿವೆ.

"ಪ್ರತಿಭೆ ಗುಡಿಸಲಲ್ಲಿ ಹುಟ್ಟಿ ಅರಮನೆಯಲ್ಲಿ ಸಾಯುತ್ತದೆ" ಎಂಬ ನುಡಿಗಟ್ಟಿನಂತೆ, ನಾವು ನಮ್ಮ ಹವ್ಯಾಸಗಳನ್ನು ಬೆಳೆಸಿಕೊಂಡರೆ ಜೀವನದಲ್ಲಿ ಉನ್ನತ ಸಾಧನೆ ಸಾಧಿಸಲು ಸಾಧ್ಯ. ಸಾಧನೆ ಎಂದರೆ ಅದು ಸುಲಭವಾಗಿ ಸಿಗುವುದಿಲ್ಲ. ಪರಿಶ್ರಮ, ತ್ಯಾಗ, ಆಸಕ್ತಿ, ಪ್ರೋತ್ಸಾಹ, ಆತ್ಮಸ್ಥೈರ್ಯ ಮತ್ತು ಛಲ ಇವುಗಳ ಸಮನ್ವಯದಿಂದ ಮಾತ್ರ ಯಶಸ್ಸಿನ ಶಿಖರ ತಲುಪಲು ಸಾಧ್ಯ.

ಆದರೆ ಇಂದಿನ ಯುವಕರು ಮೈದಾನಗಳಲ್ಲಿ ಆಟವಾಡುವುದಕ್ಕಿಂತ ಮೊಬೈಲ್‌ನಲ್ಲಿ ಲುಡೋ ಮೊದಲಾದ ಆಟಗಳನ್ನು ಆಡಲು ಹೆಚ್ಚು ಆಸಕ್ತಿ ತೋರುತ್ತಿದ್ದಾರೆ. ಈ ರೀತಿಯ ಜೀವನಶೈಲಿ ಆರೋಗ್ಯಕ್ಕೆ ಹಾನಿಕಾರಕ. ದೇಹ ಚಲನವಲನ ಕಡಿಮೆಯಾದಂತೆ, ಅನೇಕ ರೋಗಗಳು ನಮ್ಮನ್ನು ಆವರಿಸುತ್ತವೆ. ಆರಾಮದ ಜೀವನವನ್ನು ಆಯ್ಕೆಮಾಡುವುದು ಎಂದರೆ ಅನಾರೋಗ್ಯವನ್ನು ಆಹ್ವಾನಿಸುವಂತೆಯೇ.

ಮೈದಾನದಲ್ಲಿ ಆಟವಾಡುವವರು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸದೃಢರಾಗಿರುತ್ತಾರೆ. ಕ್ರೀಡೆಗಳು ಕೇವಲ ಮನರಂಜನೆಗಾಗಿ ಮಾತ್ರವಲ್ಲ, ಅವು ನಮ್ಮಲ್ಲಿ ಶಿಸ್ತನ್ನು, ತಂಡಭಾವವನ್ನು, ಆತ್ಮವಿಶ್ವಾಸವನ್ನು ಮತ್ತು ನಾಯಕತ್ವ ಗುಣಗಳನ್ನು ಬೆಳೆಸುತ್ತವೆ. ಜೊತೆಗೆ, ವಿವಿಧ ರೋಗಗಳಿಂದ ದೂರವಾಗಲು ಸಹಾಯ ಮಾಡುತ್ತವೆ.

ಆದ್ದರಿಂದ, ನಾವು ಮೊಬೈಲ್ ಆಟಗಳಿಗಿಂತ ಮೈದಾನದಲ್ಲಿ ನಡೆಯುವ ಕ್ರೀಡೆಗಳಿಗೆ ಹೆಚ್ಚು ಮಹತ್ವ ನೀಡಬೇಕು. ದಿನನಿತ್ಯ ಸ್ವಲ್ಪ ಸಮಯವನ್ನು ಆಟಗಳಿಗೆ ಮೀಸಲಿಟ್ಟು ಆರೋಗ್ಯಕರ ಜೀವನವನ್ನು ನಡೆಸುವುದು ನಮ್ಮ ಕರ್ತವ್ಯ. ಆರೋಗ್ಯವೇ ಸಂಪತ್ತು ಎಂಬ ಮಾತನ್ನು ನೆನಪಿನಲ್ಲಿ ಇಟ್ಟುಕೊಂಡು, ಎಲ್ಲರೂ ಆಟ ಅಂಗಳದಲ್ಲಿ ಆಡಿ ಮೊಬೈಲ್‌ನಲ್ಲಿ ಅಲ್ಲ ಎಂಬ ಸಂದೇಶವನ್ನು ಪಾಲಿಸೋಣ.

### ಮೊಬೈಲ್ ಆಟದಿಂದ ದುಷ್ಪರಿಣಾಮಗಳೇ ಹೆಚ್ಚು.

* ಮಾನಸಿಕ ಅಸ್ವಸ್ಥತೆ
* ತಲೇನೋವು
* ಕಣ್ಣುಗಳು ಪೊರೆ
* ಕಣ್ಣಲ್ಲಿ ನೀರು ಬರುವುದು
* ಸೋಂಬೇರಿ ಜೀವನ
* ವ್ಯಸನ
* ಓದಿನಲ್ಲಿ ಇನ್ನಡೆ
* ಸಾಮಾಜಿಕ ಸಂಪರ್ಕ ಕಡಿಮೆ
* ಹಿಂಸಾತ್ಮಕ ಮನೋಭಾವ
* ಏಕಾಗ್ರತೆ ಕೊರತೆ
* ಸೃಜನಶೀಲ ಇಲ್ಲದಿರುವುದು
* ಒಂಟಿತನ
* ಸ್ಪಂದನೆ ಕೊರತೆ
* ಕರೇನ್ಸಿ ತೊಂದರೆ
* ಸಮಯ ವ್ಯರ್ಥ
* ಆನ್ಲೈನ್ ಬೆಟ್ಟಿಂಗ್ ಗೆ ದಾರಿ
* ಅಪರಾಧಗಳಲ್ಲಿ ಭಾಗಿ ಸಾದ್ಯತೆ
* ನಿರುದ್ಯೋಗ



* ಬೇಗ ಸಿಟ್ಟು ಬರುವುದು.
* ಮಾನವ ಸಂಪರ್ಕದಿಂದ ದೂರ
* ಅನಾರೋಗ್ಯ ಬಳಲು.
* ಜೀವನದ ಉದ್ದೇಶ ಮರೆ.

### ಮೈದಾನದ ಆಟದಿಂದಾಗುವ ಲಾಭಗಳು:–

* ಹೊಂದಾಣಿಕೆ
* ದೈಹಿಕ ಆರೋಗ್ಯ ವೃದ್ಧಿ
* ಮಾನಸಿಕ ಆರೋಗ್ಯ ಚೇತರಿಕೆ
* ಉತ್ತಮ ಮೈಕಟ್ಟು
* ಸೃಜನಶೀಲತೆ
* ಬೆವರಿನಿಂದ ರೋಗ ಲಕ್ಷಣ ದೂರ
* ನಾಯಕತ್ವ ಬೆಳವಣಿಗೆ
* ಎಲ್ಲಾ ಸಮೂದಯಾದ ಸಂಪರ್ಕ
* ನಾವೆಲ್ಲಾ ಒಂದೇ ಎಂಭಾ ಭಾವ
* ಏಕಾಗ್ರತೆ.
* ತಂಡದ ಭಾವನೆ
* ಟೀಮ್ ವರ್ಕ್
* ಶಿಸ್ತು ನಿಯಮ ಪಾಲನೆಗೆ ಒತ್ತು
* ಮಾನಸಿಕ ಒತ್ತಡ ನಿವಾರಣೆ
* ಆತ್ಮವಿಶ್ವಾಸ ವೃದ್ಧಿ
* ಸ್ನೇಹ ಬಂಧುತ್ವ ಗಟ್ಟಿ
* ಸಹನಶೀಲತೆ
* ಅತ್ಯುತ್ತಮ ವ್ಯಕ್ತಿತ್ವ
* ಸಮಯ ಪಾಲನೆ

## ಕಾರಾಗೃಹದ ಬಂದಿಗಳಿಗೆ ಸಾಕ್ಷರತಾ ಜಾಗೃತಿ ಕಾರ್ಯಾಗಾರ



**ಕಲಬುರಗಿ,ಮಾ.27:** ಇಲ್ಲಿನ ಕೇಂದ್ರ ಕಾರಾಗೃಹದಲ್ಲಿ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಡಯಟ್ ಹಾಗೂ ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ ಹಾಗೂ ಕೇಂದ್ರ ಕಾರಾಗೃಹ ಸಹಯೋಗದೊಂದಿಗೆ ಬಂದಿಗಳಿಗೆ ಸಾಕ್ಷರತಾ ಜಾಗೃತಿ ಅರಿವಿನ ಕಾರ್ಯಗಾರ ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಆಗಮಿಸಿದ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಹನುಮಂತರಾಯ ಹರನಾಳ ಮಾತನಾಡುತ್ತಾ ಕಾರಾಗೃಹದಲ್ಲಿ ಅನಕ್ಷರಸ್ಥರು ಓದಿನ ಕಡೆಗೆ ಹೆಚ್ಚಿನ ಗಮನವನ್ನು ಕೇಂದ್ರೀಕರಿಸಿ ಸರಿ ತಪ್ಪುಗಳ ಪರಿಕಲ್ಪನೆಗಳನ್ನು ಸಾಕ್ಷರತೆಯ ಮೂಲಕ ಕಂಡುಕೊಂಡು ಉತ್ತಮ ಬದುಕಿಗೆ ಅಣಿಯಾಗಿ ಬೇರೊಬ್ಬರಿಗೆ ದಾರಿದೀಪವಾಗುವ ನಿಟ್ಟಿನಲ್ಲಿ ತಾವುಗಳು ಬಾಳ ಬೇಕೆಂದು ಹೇಳಿದರು ಈ ಕಾರ್ಯಕ್ರಮದಲ್ಲಿ 20 ಕಲಿಕಾರ್ಥಿಗಳಿಗೆ ಒಬ್ಬ ಬೋಧಕರನ್ನು ನೇಮಕ ಮಾಡಿ ಅವರಿಗೆ ಅಗತ್ಯ ಕಲಿಕಾ ಪರಿಕರಗಳನ್ನು ಮತ್ತು ಬೋಧಕರಿಗೆ ತರಬೇತಿಗಳು ನೀಡಲಾಗುವುದೆಂದು ಹೇಳಿದರು.

ಅತಿಥಿಗಳಾಗಿ ಆಗಮಿಸಿದ ಕಾರ್ಯಕ್ರಮ ಪ್ರಾಯೋಜಕ ಗಿರೀಶ್ ಜಕಾಪೂರ ಮಾತನಾಡುತ್ತಾ ಅಕ್ಷರವನ್ನು ಕಲಿತು ಸುಂದರ ಬದುಕನ ಕಟ್ಟಿಕೊಳ್ಳಬೇಕು ಈ ಕಾರ್ಯಕ್ರಮ ಅನುಷ್ಠಾನದಲ್ಲಿ ಅಕ್ಷರ ಕಲಿಕೆಗೆ ಬೇಕಾದ ಪೂರಕ ದಾಖಲೆಗಳನ್ನು ಒದಗಿಸಿಕೊಡ ಲಾಗುವುದು ಎಂದು ಹೇಳಿದರು.

ಇನ್ನೋರ್ವ ಅತಿಥಿಗಳಾಗಿ ಭಾಗವಹಿಸಿದ ಕೇಂದ್ರ ಕಾರಾಗೃಹದ ಸಹಾಯಕ ಅಧೀಕ್ಷಕ ಬಿ ಸುರೇಶಮಾತನಾಡುತ್ತ ಬಂದಿ ನಿವಾಸಿಗಳು ಕ್ರಿಯಾತ್ಮಕ ಸಾಕ್ಷರತಾ ಕಾರ್ಯಕ್ರಮ ಅಚ್ಚುಕಟ್ಟಾಗಿ ಜಾರಿಗೆ ತರಬೇಕೆಂದು ಕರೆ ನೀಡಿದರು ಅಲ್ಲದೆ ಸಾಕ್ಷರದ ಶಿಕ್ಷಾ ವಿಶೇಷ ಮಾಫಿ ಯನ್ನು ನೀಡಲಾಗುವುದು ಹಾಗೂ ವಿಚಾರಣಾ ಬಂದಿಗಳಿಗೆ ಅವರ ಉತ್ತಮ ನಡತೆ ಹಾಗೂ ಸಾಕ್ಷರತೆ ಪಡೆದಿರುವ ಬಗ್ಗೆ ನ್ಯಾಯಾಲಯಕ್ಕೆ ಮಾಹಿತಿ ನೀಡಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ಕೆ ಸುರೇಶ್ ಮಾತನಾಡುತ್ತಾ ಅಕ್ಷರದ ಬೀಜ ಬಿತ್ತೋಣ ಬೆಳೆ ಬೆಳೆಯೋಣ ಎಂಬಂತೆ ಜ್ಞಾನಾಮೃತ ತುಂಬುವ ಕಾಯಕಕ್ಕೆ ಅಕ್ಷರದ ಕ್ರಾಂತಿಯನ್ನು ಸಾಕ್ಷರತೆಯಲ್ಲಿ ಹೊಂದಬೇಕಾದರೆ ಬುದ್ಧಿಯನ್ನು ವಿವೇಕದ ಕಡೆಗೆ ಕೊಡಬೇಕು ಹೊರತು ಅವಿವೇಕದ ಕಡೆಯಲ್ಲ ಬುದ್ಧಿಯನ್ನು ಪರಿಶುದ್ಧತೆಯ ಮನಸ್ಸಿನೊಳಗೆ ತೆಗೆದುಕೊಂಡು ಹೋದರೆ ಅಪರಾಧ ಕಡಿಮೆಯಾಗುತ್ತದೆ ಎಂದು ಹೇಳಿದರು.ಕಾರ್ಯಕ್ರಮದಲ್ಲಿ ಸಹಾಯಕ ಅಧೀಕ್ಷಕ ಚನ್ನಪ್ಪ ಯಟಗಲ್, ಜೈಲರ್‌ಗಳಾದ ಸಾಗರ ಪಾಟೀಲ್, ಶ್ರೀಮಂತಗೌಡ ಪಾಟೀಲ್,ಪುಂಡಲೀಕ ಟಿ ಕೆ ಹಾಗೂ ಸಂಸ್ಥೆಯಲ್ಲಿ ಅಧಿಕಾರಿ ಸಿಬ್ಬಂದಿಗಳು ಭಾಗವಹಿಸಿದರು. ಭೀಮಾಶಂಕರ್ ಡಾಂಗೆ ಸ್ವಾಗತಿಸಿದರು ಹಾಗೂ ಸಂಸ್ಥೆಯ ಶಿಕ್ಷಕ ನಾಗರಾಜ್ ಮುಲಗೆ ನಿರೂಪಿಸಿ ಕೊನೆಯಲ್ಲಿ ವಂದಿಸಿದರು.

## ತುಮುಲ್ ಮರು ಮತ ಎಣಿಕೆ: ಕೊಂಡವಾಡಿ ಚಂದ್ರಶೇಖರ್ ಆಯ್ಕೆಗೆ ಸುಪ್ರೀಂ ಕೋರ್ಟ್ ತಡೆ

**ಮಧುಗಿರಿ, ಮಾ. 29–** ತುಮಕೂರು ಹಾಲು ಒಕ್ಕೂಟದ ಚುನಾವಣಾ ಫಲಿತಾಂಶದ ವಿಷಯದಲ್ಲಿ ರಾಜ್ಯ ಹೈಕೋರ್ಟ್ ಕೊಂಡವಾಡಿ ಚಂದ್ರಶೇಖರ್ ಅವರಿಗೆ ನೀಡಿದ ಆದೇಶವನ್ನು ಸುಪ್ರೀಂ ಕೋರ್ಟ್ ತಡೆ ಹಿಡಿದಿದೆ.

ಈ ಸಂಬಂಧ ನ್ಯಾಯಾಲಯದ ತೀರ್ಪು ಏ.6ಕ್ಕೆ ಹೊರಬೀಳಲಿದ್ದು, ಅಲ್ಲಿಯವರೆಗೂ ಯಥಾ ಸ್ಥಿತಿ ಕಾಪಾಡುವ ಮೂಲಕ ಹಾಲಿ ತುಮುಲ್ ನಿರ್ದೇಶಕ ಬಿ. ನಾಗೇಶ್ ಬಾಬು ರವರನ್ನೇ ಮುಂದುವರೆಸುವಂತೆ ಸುಪ್ರೀಂ ಕೋರ್ಟ್‌ನಿಂದ ಆದೇಶ ಜಾರಿಯಾಗಿದೆ.

ಕಳೆದ ವರ್ಷ ನಡೆದ ತುಮುಲ್ ಚುನಾವಣೆಯ ಫಲಿತಾಂಶ ಪ್ರಶ್ನಿಸಿ ಪರಾಜಿತ ಅಭ್ಯರ್ಥಿ ಕೊಂಡವಾಡಿ ಚಂದ್ರಶೇಖರ್ ಬೆಂಗಳೂರು ಹೈಕೋರ್ಟ್ ಮೊರೆ ಹೋಗಿದ್ದರು. ಈ ಸಂಬಂಧ ತೀರ್ಪು ಪ್ರಕಟವಾಗಿ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಳ್ಳಲು ಕೊಂಡವಾಡಿ ಚಂದ್ರಶೇಖರ್ ರವರ ಪರ ಆದೇಶ ಜಾರಿಯಾಗಿತ್ತು. ಇದನ್ನು ಪ್ರಶ್ನಿಸಿ ಹಾಲಿ ತುಮುಲ್ ನಿರ್ದೇಶಕ ಬಿ. ನಾಗೇಶ್ ಬಾಬು ರವರು ಅಗತ್ಯ ದಾಖಲೆ ಸಮೇತ ಸುಪ್ರೀಂ ಕೋರ್ಟ್ ಮೊರೆ ಹೋಗಿ ತಡೆಯಾಜ್ಞೆ ತಂದಿದ್ದು, ಹಾಲಿ ನಾಗೇಶ್ ಬಾಬು ರವರೇ ತುಮುಲ್ ನಿರ್ದೇಶಕರಾಗಿ ಮುಂದುವರಿಸುವಂತೆ ಸುಪ್ರೀಂ ಕೋರ್ಟ್ ಆದೇಶ ಜಾರಿಪಡಿಸಿದೆ.ಪ್ರಬಲ ಸಮುದಾಯಕ್ಕೆ ಸೇರಿದ ಬಿ.ನಾಗೇಶ್‌ಬಾಬು ಮತ್ತು ಕೊಂಡವಾಡಿ ಚಂದ್ರಶೇಖರ್ ರವರ ಪ್ರತಿಷ್ಠೆಯಿಂದಾಗಿ ತುಮುಲ್ ನಿರ್ದೇಶಕರ ಸ್ಥಾನದ ಫಲಿತಾಂಶವು ಹಾವು–ಏಣಿ ಆಟದಂತಾಗಿದ್ದು.. ತುಮುಲ್ ನಿರ್ದೇಶಕರ ಸ್ಥಾನಕ್ಕಾಗಿ ಇಬ್ಬರೂ ರಾಜಕೀಯ ಜಿದ್ದಿಗೆ ಬಿದ್ದಿದ್ದು, ಇದು ಯಾವ ಹಂತಕ್ಕೆ ತಲುಪುತ್ತದೋ ಎಂಬುದರ ಬಗ್ಗೆ ಕಾಲವೇ ಉತ್ತರ ನೀಡಬೇಕಿದೆ

ಏನಿದು ಪ್ರಕರಣ– 2021 ರಲ್ಲಿ ತುಮುಲ್ ಬೈಲಾದಲ್ಲಿ ತಿದ್ದಿಪಡಿ ಮಾಡಲಾಗಿದ್ದು, ತುಮುಲ್ ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಪ್ರತೀ ದಿನ ಬೆಳಗ್ಗೆ ಮತ್ತು ಸಂಜೆ 150 ಕೆ.ಜಿ ಹಾಲನ್ನು 270 ದಿನಗಳ ಕಾಲ ಡೈರಿಗೆ ಹಾಕಿರಬೇಕು. ಅವರು ಮಾತ್ರ ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸಲು ಅರ್ಹರು. ಆದರೆ ಬಿ. ನಾಗೇಶ್‌ಬಾಬು ಕಡಿಮೆ ಹಾಲು ಸರಬರಾಜು ಮಾಡಿದ್ದಾರೆ. ಆದ್ದರಿಂದ ಇವರ ನಿರ್ದೇಶಕರ ಸ್ಥಾನವನ್ನು ರದ್ದು ಮಾಡಬೇಕು ಎಂದು ಆರೋಪಿಸಿ ಕೊಂಡವಾಡಿ ಚಂದ್ರಶೇಖರ್ ಈ ಹಿಂದೆ ಏಕ ಸದಸ್ಯ ಪೀಠದ ಮೊರೆ ಹೋಗಿದ್ದರು. ಈ ಹಿನ್ನೆಲೆಯಲ್ಲಿ ಹೈಕೋರ್ಟ್‌ನ ಏಕಸದಸ್ಯ ಪೀಠ ನಾಗೇಶ್ ಬಾಬುರವರ ನಿರ್ದೇಶಕರ ಸ್ಥಾನವನ್ನು ಅಸಿಂಧು ಎಂದು ಆದೇಶಿಸಿತ್ತು.

ಆದರೆ ನ್ಯಾಯಾಲಯದ ಮೊರೆ ಹೋಗಿಯೇ ಮತದಾನದ ಡೆಲಿಗೇಟ್ಸ್ ತಂದು ತುಮುಲ್ ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸಿದ್ದು, ಇದರ ಜತೆಗೆ ಮೂರು ವರ್ಷಗಳಿಗೂ ಹೆಚ್ಚು ಕಾಲ ಪ್ರತೀ ದಿನ 150 ಲೀಟರ್‌ನಂತೆ 45500 ಲೀಟರ್ ಗೂ ಹೆಚ್ಚು ಹಾಲು ಸರಬರಾಜು ಮಾಡಲಾಗಿದೆ ಎಂದು ದಾಖಲೆ ಸಮೇತ ಏಕಸದಸ್ಯ ಪೀಠ ನೀಡಿದ್ದ, ಆದೇಶವನ್ನು ಪ್ರಶ್ನಿಸಿ ಮಧುಗಿರಿಯ ನಾಗೇಶ್ ಬಾಬು ದ್ವಿ ಸದಸ್ಯ ಪೀಠದಲ್ಲಿ ಮೇಲ್ಮನವಿ ಸಲ್ಲಿಸಿದ್ದರು.ಈ ಸಂದರ್ಭದಲ್ಲಿ ಏಕ ಸದಸ್ಯ ಪೀಠ ನೀಡಿದ್ದ ತೀರ್ಪನ್ನು ರದ್ದುಗೊಳಿಸಿ ಚುನಾವಣೆ ಫಲಿತಾಂಶವೇ ಅಂತಿಮ ಎಂದು ಹೈಕೋರ್ಟ್ ದ್ವಿ ಸದಸ್ಯ ಪೀಠ ಆದೇಶ ಹೊರಡಿಸಿತ್ತು. ಈ ತೀರ್ಪನ್ನು ಪ್ರಶ್ನಿಸಿ, ಕೊಂಡವಾಡಿ ಚಂದ್ರಶೇಖರ್ ಮೇಲ್ಮನವಿ ಸಲ್ಲಿಸಿ, ಅದರಲ್ಲಿ ಯಶಸ್ಸುಗಳಿಸಿ ಮತ್ತೆ ತುಮುಲ್ ನಿರ್ದೇಶಕರಾಗಿ ಕೊಂಡವಾಡಿ ಚಂದ್ರಶೇಖರ್ ಆಯ್ಕೆಯೇ ಅಂತಿಮ ಎಂಬ ತೀರ್ಪು ಪಡೆದಿದ್ದರು. ಈಗ ಈ ಆದೇಶಕ್ಕೆ ಸುಪ್ರೀಂ ಕೋರ್ಟ್ ಬ್ರೇಕ್ ಹಾಕಿದ್ದು, ಯಾಥಾ ಸ್ಥಿತಿ ಕಾಯ್ದುಕೊಳ್ಳಲು ಸೂಚನೆ ನೀಡಿದೆ.

ಕಳೆದ ವರ್ಷ ತುಮುಲ್ ಒಕ್ಕೂಟಕ್ಕೆ ನಡೆದಿದ್ದ ಚುನಾವಣೆಯಲ್ಲಿ ಬಂದ್ರೇಹಳ್ಳಿ ಹಾಲು ಉತ್ಪಾದಕ ಸಹಕಾರ ಸಂಘದಿಂದ ಬಿ. ನಾಗೇಶ್ ಬಾಬು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಮತ್ತು ಕೊಂಡವಾಡಿ ಹಾಲು ಉತ್ಪಾದಕ ಸಹಕಾರ ಸಂಘದಿಂದ ಕೊಂಡವಾಡಿ ಚಂದ್ರಶೇಖರ್ ಜೆಡಿಎಸ್ ಬೆಂಬಲಿತ ಅಭ್ಯರ್ಥಿಯಾಗಿ ತುಮುಲ್ ಚುನಾವಣೆಗೆ ಸ್ಪರ್ಧಿಸಿದ್ದರು. ಜೆಡಿಎಸ್ ಬೆಂಬಲಿತ ಕೊಂಡವಾಡಿ ಚಂದ್ರಶೇಖರ್ 53 ಮತಗಳನ್ನು ಗಳಿಸಿದ್ದರೆ, 62 ಮತಗಳನ್ನು ಗಳಿಸಿದ್ದ ಕಾಂಗ್ರೆಸ್ ಬೆಂಬಲಿತ ಬಿ. ನಾಗೇಶ್‌ಬಾಬು 9 ಮತಗಳ ಅಂತರದಿಂದ ಜಯಗಳಿಸಿದ್ದರು.

ನಮ್ಮ ಬಂದ್ರೆ ಹಳ್ಳಿ ಹಾಲು ಉತ್ಪಾದಕ ಸಹಕಾರ ಸಂಘವು ಕಳೆದ ಐದು ವರ್ಷಗಳಲ್ಲಿ ಪ್ರತಿ ಸಹಕಾರಿ ವರ್ಷ (270 ದಿನಗಳು) ದಿನಕ್ಕೆ 150 ಕೆಜಿಗಳಂತೆ ಹಾಲು ಪೂರೈಸಿರಬೇಕು. ನಮ್ಮ ಸಂಘವು ಪ್ರತಿ ವರ್ಷ 40,500 ಲೀಟರ್ ಗಿಂತ ಹೆಚ್ಚು ಹಾಲು ಸರಬರಾಜು ಮಾಡಲಾಗಿರುತ್ತದೆ. 2021 –22 ರಲ್ಲಿ ಕರ್ನಾಟಕ ಸರ್ಕಾರದ ಸಹಕಾರಿ ಕಾಯ್ದೆ ಪ್ರಕಾರ ಕನಿಷ್ಠ ಸೇವೆ ಪೂರೈಕೆಯಲ್ಲಿ ಮತ್ತು ವಾರ್ಷಿಕ ಮಹಾಸಭೆಗೆ ಈ ರೀತಿಯಾಗಿ ಕಾನೂನಿಗೆ ತಿದ್ದುಪಡಿಯನ್ನು ತಂದಿರುತ್ತಾರೆ . ಇದರ ಪ್ರಕಾರವಾಗಿ ನಮ್ಮ ಬಂದ್ರೆ ಹಳ್ಳಿ ಸಹಕಾರ ಸಂಘವು ಕನಿಷ್ಠ ಸೇವೆ ಪೂರೈಕೆಯಲ್ಲಿ ಯಾವುದೇ ಲೋಪ ಕಂಡು ಬಂದಿರುವುದಿಲ್ಲ. ಈಗಾಗಲೇ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ನಮಗೆ ಮಾಹಿತಿ ನೀಡಿ ಕನಿಷ್ಠ ಸೇವೆ ಪೂರೈಕೆಯಲ್ಲಿ 5 ವರ್ಷಗಳು 40500 ಕೆಜಿಗಿಂತ ಗಿಂತ ಹೆಚ್ಚು ಹಾಲು ಸರಬರಾಜು ಮಾಡಲಾಗಿರುತ್ತದೆ ಎಂದು ದೃಢೀಕರಣ ನೀಡಿರುತ್ತಾರೆ .

ಈ ವಿಚಾರವನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಸ್ತಾಪಿಸಿದ್ದು ನಾವು ಸಲ್ಲಿಸಿದ್ದ ಎಸ್ ಎಲ್ ಪಿ ಗೆ ಉಚ್ಚ ನ್ಯಾಯಾಲಯದ ಆದೇಶಕ್ಕೆ ತಡೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಯಥಾ ಸ್ಥಿತಿ ಮುಂದುವರೆಯುವಂತೆ ಸರ್ವೋಚ್ಚ ನ್ಯಾಯಾಲಯ ಯಥಾ ಸ್ಥಿತಿಯಂತೆ ಮುಂದುವರಿಯಲು ಆದೇಶ ನೀಡಿರುತ್ತದೆ. ಮುಂದಿನ ಪ್ರಕರಣವನ್ನು ಏಪ್ರಿಲ್ 06. 2026ಕ್ಕೆ ಮುಂದೂಡಲಾಗಿದೆ ಎಂದು ತುಮುಲ್ ನಿರ್ದೇಶಕ ಬಿ. ನಾಗೇಶ್‌ಬಾಬು ತಿಳಿಸಿದ್ದಾರೆ.

## ಉಪಚುನಾವಣೆ ಬಳಿಕ ಒಳಮೀಸಲಾತಿ ವಿಶೇಷ ಸಭೆ: ಪರಂ

**ತುಮಕೂರು, ಮಾ. 28–** ರಾಜ್ಯದ ಎರಡು ಕ್ಷೇತ್ರಗಳಿಗೆ ಉಪಚುನಾವಣೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಒಳಮೀಸಲಾತಿ ಸಂಬಂಧ ಚರ್ಚಿಸಲು ಕರೆದಿದ್ದ ವಿಶೇಷ ಸಚಿವ ಸಂಪುಟ ಸಭೆಯನ್ನು ಮುಂದೂಡಲಾಗಿದೆ. ಚುನಾವಣೆ ಬಳಿಕ ಈ ಸಭೆ ನಡೆಯಲಿದೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಇಂದಿಲ್ಲಿ ತಿಳಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ದಾವಣಗೆರೆ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ಹಿನ್ನೆಲೆಯಲ್ಲಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಚರ್ಚೆ ಮಾಡಲು ಆಗುತ್ತಿಲ್ಲ. ಹಾಗಾಗಿ ಸಭೆಯನ್ನು ಮುಂದೂಡಿದ್ದೇವೆ ಅಷ್ಟೇ ಎಂದರು.

ಹಾಗೆಯೇ ಮಧುಗಿರಿಯಲ್ಲಿ ಏ. 3 ರಂದು ಮುಖ್ಯಮಂತ್ರಿಗಳ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವೂ ಸಹ ನೀತಿ ಸಂಹಿತೆ ಜಾರಿ ಹಿನ್ನೆಲೆಯಲ್ಲಿ ಮುಂದೂಡಿಕೆಯಾಗಿದೆ. ಚುನಾವಣೆ ಬಳಿಕ ಎಲ್ಲ ಕಾರ್ಯಕ್ರಮಗಳು, ಸಭೆಗಳು ನಡೆಯಲಿವೆ ಎಂದು ಅವರು ಹೇಳಿದರು.

ತುಮಕೂರಿಗೆ ಏ. 1 ರಂದು ಸಿದ್ದಗಂಗೆಯ ಲಿಂಗೈಕ್ಯ ಡಾ. ಶ್ರೀ ಶಿವಕುಮಾರ ಸ್ವಾಮೀಜಿಯರ 119ನೇ ಜಯಂತ್ಯೋತ್ಸವದಲ್ಲಿ ಭಾಗಿಯಾಗಲು ರಾಷ್ಟ್ರಪತಿಗಳು ಅಂದು ಬೆಳಿಗ್ಗೆ 10.30ಕ್ಕೆ ಆಗಮಿಸುತ್ತಿದ್ದಾರೆ. ನಮ್ಮ ಜಿಲ್ಲೆಗೆ ಆಗಮಿಸುತ್ತಿರುವ ರಾಷ್ಟ್ರಪತಿಗಳು ಸ್ವಾಗತ ಕೋರುತ್ತೇನೆ. ನಮ್ಮ ಜಿಲ್ಲೆಗೆ ಅವರು ಭೇಟಿ ನೀಡುತ್ತಿರುವುದು ಬಹಳ ಸಂತೋಷ ತಂದಿದೆ ಎಂದರು. ಶ್ರೀಗಳ ಆದರ್ಶ ಜೀವಂತವಾಗಿ ಜನಸಮುದಾಯಕ್ಕೆ ತಲುಪುತ್ತಿದೆ. ಪ್ರತಿ ವರ್ಷವೂ ಶ್ರೀಗಳ ಆದರ್ಶ, ಜೀವನ ಚರಿತ್ರೆ ಪುನರುಚ್ಚಾರವಾಗುತ್ತಿದೆ. ಇದು ನಮ್ಮ ನಾಡಿನ ಸುದೈವ ಎಂದರು.ಐಪಿಎಲ್ ಪಂದ್ಯಕ್ಕೆ ಶುಭ ಹಾರೈಕೆ–ಕಳೆದ ವರ್ಷ ಐಪಿಎಲ್ ಪಂದ್ಯದಲ್ಲಿ ಆರ್‌ಸಿಬಿ ಗೆದ್ದ ಬಳಿಕ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಕಸ್ಮಿಕ ಘಟನೆ ನಡೆದು ಹೋಯಿತು. ಈ ಘಟನೆ ನಡೆಯಬಾರದಿತ್ತು. ಮುಂದೆ ಇಂತಹ ಘಟನೆ ಮರುಕಳಿಸದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರಂಭವಾಗುತ್ತಿರುವ ಮೊದಲನೇ ಆರ್‌ಸಿಬಿ ಪಂದ್ಯಕ್ಕೆ ನನ್ನ ಶುಭ ಹಾರೈಕೆಗಳು ಎಂದರು. 14 ಪಂಚಾಯ್ತಿಗಳ ಸೇರ್ಪಡೆ ರದ್ದಾಗಿಲ್ಲ– ತುಮಕೂರು ಮಹಾನಗರ ಪಾಲಿಕೆಗೆ 14 ಪಂಚಾಯ್ತಿಗಳನ್ನು ಸೇರ್ಪಡೆ ಮಾಡುವ ಪ್ರಸ್ತಾವನೆ ರದ್ದಾಗಿಲ್ಲ. ಆದರೆ 2027ರ ವರೆಗೆ ಜನಗಣತಿ ನಡೆಯಲಿದೆ. ಈ ಜನಗಣತಿ ಸಮೀಕ್ಷೆ ಬಳಿಕ ಯಾವ ಯಾವ ಹಳ್ಳಿಗಳನ್ನು ಸೇರಿಸಬೇಕು ಎಂಬ ಕುರಿತು ತೀರ್ಮಾನಿಸಲಾಗುವುದು ಎಂದರು.ತುಮಕೂರು ಜಿಲ್ಲೆಯಲ್ಲಿ ಇದುವರೆಗೂ ಕುಡಿಯುವ ನೀರಿನ ಸಮಸ್ಯೆ ತಲೆದೋರಿಲ್ಲ. ಜಿಲ್ಲೆಯ 70 ಕಡೆಗಳಲ್ಲಿ ಅಲ್ಪ ಪ್ರಮಾಣದಲ್ಲಿ ಸಮಸ್ಯೆ ಇದೆ. ಈಗಾಗಲೇ 15 ಕಡೆಗಳಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ ಎಂದರು.

ತುಮಕೂರು ತಾಲ್ಲೂಕು, ಸಿರಾ ತಾಲ್ಲೂಕು ಹಾಗೂ ಪಾವಗಡ ತಾಲ್ಲೂಕಿನ ಕೆಲ ಹಳ್ಳಿಗಳಲ್ಲಿ ಮಾತ್ರ ಕುಡಿಯುವ ನೀರಿನ ಸಮಸ್ಯೆ ಇದೆ ಎಂಬ ಮಾಹಿತಿಯನ್ನು ಜಿಲ್ಲಾಡಳಿತ ನೀಡಿದೆ. ಇದಕ್ಕೆ ಪೂರಕವಾಗಿ ಅಗತ್ಯ ಕ್ರಮಗಳನ್ನು ಸಹ ಜಿಲ್ಲಾಡಳಿತ ಕೈಗೊಂಡಿದೆ ಎಂದು ಅವರು ಹೇಳಿದರು.

ತುಮಕೂರು ನಗರಕ್ಕೆ ಕುಡಿಯುವ ನೀರು ಪೂರೈಕೆ ಮಾಡುವ ಬುಗುಡನಹಳ್ಳಿ ಜಲಸಂಗ್ರಹಾಗಾರದಲ್ಲಿ ಏಪ್ರಿಲ್ ಅಂತ್ಯದವರೆಗೆ ನೀರಿನ ಸಂಗ್ರಹ ಇರಲಿದೆ. ಹಾಗೆಯೇ ಗೊರೂರು ಜಲಾಶಯದಲ್ಲೂ ನೀರಿದೆ. ಸದ್ಯಕ್ಕೆ ಯಾವುದೇ ರೀತಿಯ ಸಮಸ್ಯೆ ಉದ್ಭವಿಸುವುದಿಲ್ಲ ಎಂದರು.ನಾನು ಈಗಾಗಲೇ ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ರವರೊಂದಿಗೆ ಚರ್ಚಿಸಿದ್ದೇನೆ. ಹಾಗೆಯೇ ಹೇಮಾವತಿ ನಾಲಾ ಅಧಿಕಾರಿಗಳೊಂದಿಗೆ ಚರ್ಚಿಸಿದ್ದು, ಅಧಿಕಾರಿಗಳು ಬುಗುಡನಹಳ್ಳಿ ಜಲಸಂಗ್ರಹಗಾರಕ್ಕೆ ಬಂದು ನೀರಿನ ಮಟ್ಟವನ್ನು ಪರಿಶೀಲನೆ ಮಾಡಿ ಹೋಗಿದ್ದಾರೆ. ಬುಗುಡನಹಳ್ಳಿಯಲ್ಲಿ ನೀರು ಡೆಡ್ ಸ್ಟೋರೇಜ್ ಹಂತಕ್ಕೆ ತಲುಪಿದ ತಕ್ಷಣ ನೀರು ಬಿಡುವಂತೆ ಕೃಷ್ಣ ಬೈರೇಗೌಡರವರೊಂದಿಗೆ ಮಾತನಾಡಿದ್ದೇವೆ ಎಂದು ಅವರು ತಿಳಿಸಿದರು.

ತುಮಕೂರಿನಲ್ಲಿ ಅಂತಾರಾಷ್ಟ್ರೀಯ ಮಟ್ಟದ ಹಾಕಿ ಕ್ರೀಡಾಂಗಣ ಹಾಗೂ ಈಜು ಕೊಳ ನಿರ್ಮಾಣಕ್ಕೆ ಜಾಗ ಗುರುತಿಸಲಾಗಿದೆ. ಈ ಜಾಗವನ್ನು ಸಂಬಂಧಪಟ್ಟ ತಜ್ಞರು ಬಂದು ವೀಕ್ಷಣೆ ಮಾಡಿದ ಬಳಿಕ ಮುಂದಿನ ಕೆಲಸಗಳು ನಡೆಯಲಿವೆ ಎಂದರು.

ತುಮಕೂರಿನ ಹೊರವಲಯದಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಕ್ಕೆ 41 ಎಕರೆ ಜಾಗವನ್ನು ಕೆಐಎಡಿಬಿ ವತಿಯಿಂದ ನೀಡಲಾಗಿದೆ. ಈಗಾಗಲೇ ಮುಖ್ಯಮಂತ್ರಿಗಳು ಈ ಕ್ರೀಡಾಂಗಣ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದ್ದಾರೆ. ಕೆಎಸ್‌ಸಿಎ ವತಿಯಿಂದ ಕಾರ್ಯಾದೇಶವೂ ಆಗಿದ್ದು, ಇನ್ನೊಂದು ವರ್ಷದಲ್ಲಿ ರಣಜಿ ಪಂದ್ಯಗಳು ನಡೆಯುವ ಮಟ್ಟಿಗೆ ಕ್ರೀಡಾಂಗಣ ನಿರ್ಮಾಣವಾಗುವ ಭರವಸೆ ಇದೆ. ಮುಂದಿನ 2 ವರ್ಷಗಳಲ್ಲಿ ಕ್ರೀಡಾಂಗಣ ಸಂಪೂರ್ಣ ಸಿದ್ಧಗೊಂಡು ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳು ನಡೆಯುವ ಸಾಧ್ಯತೆ ಇದೆ ಎಂದರು.

ರಾಜ್ಯ ಸರ್ಕಾರದ ವತಿಯಿಂದ ಸೂರ್ಯನಗರದಲ್ಲಿ 1600 ಕೋಟಿ ರೂ. ವೆಚ್ಚದಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಿಸಲಾಗುತ್ತಿದೆ. ಈ ಕ್ರೀಡಾಂಗಣ ಅಹಮದಾಬಾದ್ ನರೇಂದ್ರ ಮೋದಿ ಕ್ರೀಡಾಂಗಣಕ್ಕಿಂತಲೂ ದೊಡ್ಡದಾಗಿರಲಿದೆ ಎಂದು ಅವರು ಹೇಳಿದರು.ಪತ್ರಿಕಾಗೋಷ್ಠಿಯಲ್ಲಿ ಶಾಸಕ ಜ್ಯೋತಿಗಣೇಶ್, ಜಿಲ್ಲಾಧಿಕಾರಿ ಶುಭಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಜಿ.ಪಂ. ಸಿಇಓ ಬಿ.ವಿ. ಅಶ್ವಿಜ ಉಪಸ್ಥಿತರಿದ್ದರು.

# ಹಾಲಿಗೇರಾ ಗ್ರಾಮದಲ್ಲಿ ನಕಲಿ ವೈದ್ಯರ ಅಟ್ಟಹಾಸ





**ಯಾದಗಿರಿ:ಮಾ.28:** ಜಿಲ್ಲೆಯ ವಡಗೇರಾ ತಾಲ್ಲೂಕಿನ ಹಾಲಿಗೇರಾ ಗ್ರಾಮದಲ್ಲಿ ನಕಲಿ ವೈದ್ಯರ ಹಾವಳಿ ಗಂಭೀರ ಸ್ವರೂಪ ಪಡೆದುಕೊಂಡಿದ್ದು, ಸಾರ್ವಜನಿಕರ ಜೀವ ಭದ್ರತೆ ಊಣಜಟಜಿ ಅಪಾಯದಲ್ಲಿದೆ ಎಂಬ ಆತಂಕ ವ್ಯಕ್ತವಾಗಿದೆ. ಆರೋಗ್ಯ ಜಾಗೃತಿ ಕೊರತೆಯನ್ನು ದುರುಪಯೋಗಪಡಿಸಿಕೊಂಡ ಕೆಲವರು ಯಾವುದೇ ಮಾನ್ಯ ಅರ್ಹತೆ ಇಲ್ಲದೆ ವೈದ್ಯರಂತೆ ನಟಿಸಿ ಚಿಕಿತ್ಸೆ ನೀಡುತ್ತಿರುವುದು ಬೆಳಕಿಗೆ ಬಂದಿದೆ.
ಗ್ರಾಮಸ್ಥರ ದೂರಿನ ಪ್ರಕಾರ, ಅಮೀನ್ ಸಾಬ್ ಮೌಲನ್ ಎಂಬ ವ್ಯಕ್ತಿ ಯಾವುದೇ ಅಧಿಕೃತ ವೈದ್ಯಕೀಯ ಪದವಿ ಅಥವಾ ಅನುಮತಿ ಇಲ್ಲದೆ ಕ್ಲಿನಿಕ್ ನಡೆಸುತ್ತಿದ್ದು, ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವುದು ಬಹಿರಂಗವಾಗಿದೆ. ಅವರ ಕ್ಲಿನಿಕ್‌ನಲ್ಲಿ ಕಡ್ಡಾಯವಾಗಿ ಇರಬೇಕಾದ ಕ್ಲಿನಿಕ್ ಲೈಸೆನ್ಸ್, ಟ್ರೇಡ್ ಲೈಸೆನ್ಸ್, ರಾಜ್ಯ ವೈದ್ಯಕೀಯ ಮಂಡಳಿ ನೋಂದಣಿ, ರಿಜಿಸ್ಟ್ರೇಷನ್ ಸಂಖ್ಯೆ, ಹಾಗು ವೈದ್ಯರ ಹೆಸರು ಮತ್ತು ಪದವಿ ಹೊಂದಿರುವ ಪ್ರಿಸ್ಕ್ರಿಪ್ಷನ್ ಪ್ಯಾಡ್ ಸೇರಿದಂತೆ ಯಾವುದೇ ದಾಖಲೆಗಳಿಲ್ಲ ಎಂಬುದು ಆರೋಪವಾಗಿದೆ.
ಇದರೊಂದಿಗೆ, ಕ್ಲಿನಿಕಲ್ ಎಸ್ಟಾಬ್ಲಿಶ್ಮೆಂಟ್ ಕಾಯ್ದೆಯಡಿ ನೋಂದಣಿ ಇಲ್ಲದೇ ಕಾರ್ಯನಿರ್ವಹಿಸುತ್ತಿದ್ದರೂ, ತಾವು ವೈದ್ಯರೆಂದು ಹೇಳಿಕೊಂಡು ನಿರಪರಾಧ ಜನರನ್ನು ಮೋಸಗೊಳಿಸುತ್ತಿದ್ದು, ಚಿಕಿತ್ಸೆ ಹೆಸರಿನಲ್ಲಿ ಸಾವಿರಾರು ರೂಪಾಯಿ ವಸೂಲಿ ಮಾಡುತ್ತಿರುವ ಆರೋಪಗಳು ಕೇಳಿಬಂದಿವೆ.
"ಅಸಲಿ ವೈದ್ಯನೆಂಬ ನಂಬಿಕೆಯಿಂದ ನಾವು ಚಿಕಿತ್ಸೆ ಪಡೆಯಲು ಹೋಗುತ್ತೇವೆ. ನಂತರ ಅದು ನಕಲಿ ಎಂದು ತಿಳಿದು ಆಘಾತವಾಗುತ್ತಿದೆ. ನಮ್ಮ ಜೀವದೊಂದಿಗೆ ಆಟವಾಡಲಾಗುತ್ತಿದೆ," ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.
ಈ ಹಿಂದೆ ಜಿಲ್ಲಾಡಳಿತದಿಂದ ನಕಲಿ ವೈದ್ಯರ ವಿರುದ್ಧ ಕೆಲವೊಂದು ಕ್ರಮಗಳು ಕೈಗೊಳ್ಳಲಾಗಿದ್ದರೂ, ಸಮಸ್ಯೆಗೆ ಶಾಶ್ವತ ಪರಿಹಾರ ದೊರಕದಿರುವುದರಿಂದ ಸಾರ್ವಜನಿಕರಲ್ಲಿ ಅಸಮಾಧಾನ ಹೆಚ್ಚಾಗಿದೆ.
ಹೀಗಾಗಿ, ಸಂಬಂಧಿತ ಆರೋಗ್ಯ ಇಲಾಖೆ ಹಾಗೂ ಪೊಲೀಸ್ ಅಧಿಕಾರಿಗಳು ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಜೊತೆಗೆ ಗ್ರಾಮಸ್ಥರಿಗೆ ಸುರಕ್ಷಿತ, ಗುಣಮಟ್ಟದ ಆರೋಗ್ಯ ಸೇವೆ ಒದಗಿಸಲು ಶಾಶ್ವತ ಕ್ರಮಗಳನ್ನು ಜಾರಿಗೆ ತರಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

# ಡಾ.ಬಿ.ಆರ್.ಅಂಬೇಡ್ಕರ ಅವರ ಜಯಂತಿ ಪೂರ್ವಭಾವಿ ಸಭೆ




**ಅಥಣಿ :ಮಾ.28:** ಸಂವಿಧಾನ ಶಿಲ್ಪಿ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ ಅವರ ಜಯಂತಿಯನ್ನು ಏಪ್ರಿಲ್ 14 ರಂದು ತಾಲೂಕಾ ಆಡಳಿತದಿಂದ ಅದ್ದೂರಿಯಾಗಿ ಮತ್ತು ಅರ್ಥಪೂರ್ಣವಾಗಿ ಆಚರಿಸಲು ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಲಾಗಿದ್ದು. ಈ ಕಾರ್ಯಕ್ರಮದಲ್ಲಿ ಗಣ್ಯ ಮಾನ್ಯರು ಸಾರ್ವಜನಿಕರು ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ತಹಶೀಲ್ದಾರ ಸಿದರಾಯ ಭೋಸಗಿ ಹೇಳಿದರು.
ಅವರು ತಾಲೂಕಾ ಪಂಚಾಯತ್ ಸಭಾಂಗಣದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ ಅವರ ಜಯಂತಿ ಕಾರ್ಯಕ್ರಮದ ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದರು. ಡಾ.ಬಿ.ಆರ್.ಅಂಬೇಡ್ಕರ್ ಜಯಿಂತಿ ಕಾರ್ಯಕ್ರಮದಲ್ಲಿ ತಾಲೂಕಾ ಮಟ್ಟದ ಎಲ್ಲ ಅಧಿಕಾರಿಗಳು ಕಡ್ಡಾಯವಾಗಿ ಹಾಜರ ಇರಬೇಕು. ಗೈರಾದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಈ ಪ್ರಕಾಶ್ ಅಂಬೇಡ್ಕರ್ ಬ್ರಿಗೇಡ್ ತಾಲೂಕಾ ಅಧ್ಯಕ್ಷ ಮಹಾಂತೇಶ ಬಾಡಗಿ ಮಾತನಾಡಿ ಪ್ರತಿ ವರ್ಷದಂತೆ ಈ ವರ್ಷವೂ ಬಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಜಯಂತಿಯನ್ನು ವಿಜೃಂಭಣೆಯಿಂದ ಅದ್ದೂರಿಯಾಗಿ ಆಚರಿಸಬೇಕು. ಕಳೆದ ಬಾರಿ ಈ ಕಾರ್ಯಕ್ರಮದಲ್ಲಿ ತಾಲೂಕಾ ಅಧಿಕಾರಿಗಳ ಅನುಪಸ್ಥಿತಿ ಎದ್ದು ಕಾಣುತ್ತಿತ್ತು. ಆದರೆ ಈ ಬಾರಿ ಹಾಗಾಗಬಾರದು ಈ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬ ಅಧಿಕಾರಿಯೂ ಕಡ್ಡಾಯವಾಗಿ ಭಾಗವಹಿಸಿ ಜಯಂತಿಗೆ ಮೆರಗು ತರಬೇಕು. ಈ ಕಾರ್ಯಕ್ರಮದಲ್ಲಿ ಗೈರಾಗುವ ತಾಲೂಕಾ ಮಟ್ಟದ ಅಧಿಕಾರಿ ಹಾಗೂ ಸಿಬ್ಬಂದಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ತಹಶೀಲ್ದಾರ್ ಅವರಿಗೆ ಮನವಿ ಮಾಡಿದರು.
ಈ ವೇಳೆ ನ್ಯಾಯವಾದಿ ಶಶಿಕಾಂತ ಬಾಡಗಿ ಮಾತನಾಡಿ ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರು ವಿಶ್ವ ಮಾನ್ಯರು ಅವರ ಜಯಂತಿ ಆಚರಣೆಯು ಕೆಲವೇ ಜನಾಂಗದವರಿಗೆ ಮಾತ್ರ ಸೀಮಿತವಲ್ಲ ಎಂಬುದನ್ನು ಎಲ್ಲರೂ ಮನಗಾಣಬೇಕು. ಅವರು ಕೊಟ್ಟ ಸಂವಿಧಾನದಿಂದಲೇ ನಾವೆಲ್ಲರೂ ಸಮಾನತೆಯಿಂದ ಬದುಕು ಸಾಗಿಸುತ್ತಿದ್ದೇವೆ. ಅಂತಹ ಮಹಾನ್ ಚೇತನರ ಜಯಂತಿಯನ್ನು ಎಲ್ಲರೂ ಸೇರಿ ಸಂಭ್ರಮದಿಂದ ಅದ್ದೂರಿಯಾಗಿ ಆಚರಿಸೋಣ ಎಂದರು.

ಈ ತಾಲೂಕಾ ಸಮಾಜ ಕಲ್ಯಾಣ ಅಧಿಕಾರಿ ಪರಸರಾಮ ಪತ್ತಾರ ಮಾತನಾಡಿ ದೇಶಕ್ಕೆ ತಮ್ಮದೆಯಾದ ಮಹತ್ವದ ಕೊಡುಗೆ ನೀಡಿದ ಮಹನೀಯರ ಜಯಂತಿ ವಿಜೃಂಭಣೆಯಿಂದ ಆಚರಿಸೋಣ. ಇದಕ್ಕೆ ಅಧಿಕಾರಿಗಳು, ಸಮಾಜದ ಮುಖಂಡರ ಸಾರ್ವಜನಿಕರ ಸಹಕಾರ ಅವಶ್ಯವಿದೆ ಎಂದ ಅವರು ತಾಲೂಕಾ ಮಟ್ಟದ ಅಧಿಕಾರಿಗಳ ಸಂಯುಕ್ತ ಆಶ್ರಯದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಸಕಲ ಸಿದ್ಧತೆ ಮಾಡಲಾಗುವುದು ಎಂದರು.
ಈ ವೇಳೆ ಮುಖಂಡರಾದ ಶಶಿ ಸಾಳವೆ. ನ್ಯಾಯವಾದಿ ಮಿತೇಶ ಪಟ್ಟಣ. ರಾಮ ಮರಳೇರ. ಸುಕುಮಾರ ಕಾಂಬಳೆ ಮಾತನಾಡಿದರು.

ಈ ವೇಳೆ ಮುಖಂಡರಾದ ಗೌತಮ್ ಪರಾಂಜಪೆ. ಮಂಜು ಹೊಳಿಕಟ್ಟಿ. ಮಂಜು ನೂಲಿ. ಶಿವಾನಂದ ಸೌದಾಗರ. ವಿನಾಯಕ ಕಾಂಬಳೆ. ನಿಶಾಂತ್ ಮಡ್ಡಿ. ಅಭಿಷೇಕ್ ಬೆಳ್ಳಂಕ್ಕಿ. ಪರಸರಾಮ ಕಾಂಬಳೆ. ಕಪೀಲ್ ಘಟಕಾಂಬಳೆ. ಪುರಸಭೆ ಉಪಾಧ್ಯಕ್ಷ ಭುವನೇಶ್ವರಿ ಯಕ್ಕಂಚ್ಚಿ. ಅಧಿಕಾರಿಗಳಾದ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಶಿವಾನಂದ ಕಲ್ಲಾಪುರ. ಪಿಎ??? ಮಲ್ಲಿಕಾರ್ಜುನ ತಳವಾರ. ತಾಲೂಕಾ ವೈದ್ಯಾಧಿಕಾರಿ ಬಸಗೌಡಾ ಕಾಗೆ. ಪುನೀತ್ ಪಾಸೋಡಿ. ಸಿಡಿಪಿಓ ಮಂಜುನಾಥ ಸೌದಲಗೀಕರ್. ನಿಂಗಣ್ಣಗೌಡ ಬಿರಾದಾರ. ಮುಖ್ಯಾಧಿಕಾರಿ ಅಶೋಕ ಗುಡಿಮನಿ. ಘಟಕ ವ್ಯವಸ್ಥಾಪಕ ಎನ್ ಎಂ ಕೇರಿ. ಸಮಾಜ ಕಲ್ಯಾಣ ಇಲಾಖೆಯ ಓಗೇಪ್ಪಾ ಅರಟಾಳ. ಸದಾಶಿವ ಮಾಂಗ. ಚಂದ್ರಕಾಂತ ಕಾಂಬಳೆ. ಸೇರಿದಂತೆ ಹಲವರು ಉಪಸ್ಥಿತರಿದ್ದರು

# 371 (ಜೆ) ಆದೇಶಗಳ ಅನುಷ್ಠಾನ ಕುರಿತ ಸಂಪುಟ ಉಪ ಸಮಿತಿ ಸಭೆ ಪ್ರಿನ್ಸಿಪಾಲ್‌ಗಳ 310 ಹುದ್ದೆ ಆಯ್ಕೆ ಪಟ್ಟಿ ಪುನರ್ ಪರಿಶೀಲನೆಗೆ ಸೂಚನೆ



**ಬೆಂಗಳೂರು,ಮಾ.27–**ಕಲ್ಯಾಣ ಕರ್ನಾಟಕ ಭಾಗದಲ್ಲಿ ಸ್ಥಳೀಯ ವೃಂದ ಮತ್ತು ಉಳಿಕೆ ಮೂಲ ವೃಂದದಲ್ಲಿನ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂದರ್ಭದಲ್ಲಿ ವಿವಿಧ ನೇಮಕಾತಿ ಪ್ರಾಧಿಕಾರಗಳು ಅನುಸರಿಸಬೇಕಾದ ಕ್ರಮಗಳ ಬಗ್ಗೆ 371 (ಜೆ) ಅಡಿ ಹೊರಡಿಸಲಾಗಿರುವ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲನೆ ಮತ್ತು ಪರಾಮರ್ಶೆ ಕುರಿತ ಸಂಪುಟ ಉಪ ಸಮಿತಿ ಅಧ್ಯಕ್ಷರಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿತು.
ಉನ್ನತ ಶಿಕ್ಷಣ ಇಲಾಖೆ ಮೂಲಕ ಪ್ರಥಮ ದರ್ಜೆ ಕಾಲೇಜುಗಳ 310 ಹುದ್ದೆಗಳ ಆಯ್ಕೆ ಇತ್ತೀಚೆಗೆ ನಡೆದಿದ್ದು, ಆಯ್ಕೆ ಪ್ರಕ್ರಿಯೆಯಲ್ಲಿ ಲೋಪವಾಗಿದೆ ಎಂದು ಕೆಲವು ಅಭ್ಯರ್ಥಿಗಳು ಉಪಸಮಿತಿಯ ಅಧ್ಯಕ್ಷರಾದ ಪ್ರಿಯಾಂಕ್ ಖರ್ಗೆ ಅವರಿಗೆ ದೂರು ನೀಡಿದ್ದು, ಈ ಸಂಬಂಧದಲ್ಲಿ ಗುರುವಾರ ಸಚಿವ ಸಂಪುಟದ ಉಪ ಸಮಿತಿ ಸಭೆಯನ್ನು ನಡೆಸಲಾಯಿತು.
ಸಭೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯ ಸದಸ್ಯರಾದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಭಾಗವಹಿಸಿ ಹಲವಾರು ಸಲಹೆ ಸೂಚನೆಗಳನ್ನು ನೀಡಿದರು.ಉನ್ನತ ಶಿಕ್ಷಣ ಇಲಾಖೆ ಮೂಲಕ ಪ್ರಥಮ ದರ್ಜೆ ಕಾಲೇಜುಗಳ 310 ಹುದ್ದೆಗಳ ಆಯ್ಕೆ ಇತ್ತೀಚೆಗೆ ನಡೆದಿದ್ದು, ಆಯ್ಕೆ ಪ್ರಕ್ರಿಯೆಯಲ್ಲಿ ಡಿಪಿಎಆರ್ ನೀಡಿರುವ ಸ್ಪಷ್ಟ ನಿರ್ದೇಶನಗಳನ್ನು ಪಾಲಿಸುವಲ್ಲಿ ಲೋಪವಾಗಿದೆ ಎಂಬುದನ್ನು ಮನಗಂಡ ಆಯ್ಕೆ ಸಮಿತಿ ಆಯ್ಕೆ ಪಟ್ಟಿಯನ್ನು ಮರು ಪರಿಶೀಲಿಸಲು ಅಧಿಕಾರಿಗಳಿಗೆ ಸೂಚಿಸಿತು.ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹೊರಡಿಸಿರುವ ಸುತ್ತೋಲೆಗಳನ್ನು ಕಡ್ಡಾಯವಾಗಿ ಪಾಲಿಸಲು ಅಧಿಕಾರಿಗಳಿಗೆ ಸೂಚಿಸಿದ ಸಮಿತಿಯು ತಪ್ಪಿದಲ್ಲಿ ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂಬ ಎಚ್ಚರಿಕೆಯನ್ನು ನೀಡಿತು.ಸಭೆಯಲ್ಲಿ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಖುಷ್ಬು ಚೌಧರಿ, ಡಿಪಿಎಆರ್ ಪ್ರಧಾನ ಕಾರ್ಯದರ್ಶಿ ಕೆ.ಜಿ.ಜಗದೀಶ್, ಉನ್ನತ ಶಿಕ್ಷಣ ಇಲಾಖೆಯ ಆಯುಕ್ತೆ ಮಂಜುಶ್ರೀ ಭಾಗವಹಿಸಿದ್ದರು.

# ಹಿರಿಯ ನ್ಯಾಯವಾದಿ ಗವಿಸಿದ್ದಪ್ಪ ಕೋರಿ, ಅನುಸೂಯಾ ಕೋರಿ ಅವರಿಗೆ ಕರ್ನಾಟಕ ಭೂಷಣ ರಾಷ್ಟ್ರೀಯ ಪ್ರಶಸ್ತಿ ಪ್ರದಾನ



**ವಿಜಯಪುರ :ಮಾ.28:** ಜಿಲ್ಲೆಯ ಖ್ಯಾತ ಹಿರಿಯ ನ್ಯಾಯವಾದಿ.ನಿವೃತ ಡಿಸಿ ಸಿ ಬ್ಯಾಂಕ್ ವ್ಯಸ್ಥಾಪಕರಾದ ಗವಿಸಿದ್ದಪ್ಪ.ವಿ.ಕೋರಿ ಹಾಗೂ ಅವರ ಧರ್ಮ ಪತ್ನಿ ಶ್ರೀಮತಿ ಅನಸೂಯಾ.ಗ.ಕೋರಿ ಅವರಿಗೆ ಬೆಂಗಳೂರಿನ ಶ್ರೀ ಸರ್ವೇಜನ ಆರ್ಟ್ ಮತ್ತು ಕಲ್ಚರಲ್ ಟ್ರಸ್ಟ್ (ರಿ) ಬೆಂಗಳೂರು.ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಹಯೋಗದಲ್ಲಿ ವಿಜಯಪುರ ಕಂದಗಲ್ ಹಣಮಂತರಾಯ ರಂಗಮಂದಿರದಲ್ಲಿ ಜರುಗಿದ ಸಾಂಸ್ಕೃತಿಕ ಜನಪದ ವೈಭವ ಮತ್ತು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ಅದ್ದೂರಿ ವೇದಿಕೆಯಲ್ಲಿ ಖ್ಯಾತ ಹಿರಿಯ ನ್ಯಾಯವಾದಿ. ಕೊಪ್ಪಳ ಜಿಲ್ಲಾ ನಿವೃತ
ಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ಗವಿಸಿದ್ದಪ್ಪ. ವಿ.ಕೋರಿ ಹಾಗೂ ಅವರ ಧರ್ಮ ಪತ್ನಿ ಶ್ರೀಮತಿ ಅನುಸೂಯಾ.ಗ.ಕೋರಿ ಅವರನ್ನು ಸಾಮಜಿಕ.ಸಹಕಾರಿ.
ಧಾರ್ಮಿಕ.ನ್ಯಾಯಾಂಗ ಕ್ಷೇತ್ರದ ಅಪಾರ ಸೇವೆ ಪರಿಗಣಿಸಿ ದಂಪತಿಗಳನ್ನು "ಕರ್ನಾಟಕ ಭೂಷಣ"
ರಾಷ್ಟ್ರೀಯ ಪ್ರಶಸ್ತಿಯನ್ನು.ವಿಶ್ವಗುರು ಶ್ರೀ ಬಸವಣ್ಣ ಹಾಗೂ ವೀರ ರಾಣಿ ಕಿತ್ತೂರು ಚೆನ್ನಮ್ಮಳ ಸ್ಮರಣಿಕೆ.ಪ್ರಶಸ್ತಿ ಪತ್ರ. ಶಾಲು ಹೊದಿಸಿ ಫಲಪುಷ್ಪ ವಿತರಿಸಿ ಗೌರವಿಸಲಾಯಿತು. ಈ ಸಂಧರ್ಭದಲ್ಲಿ ಶ್ರೀ ಸರ್ವೇಜನ ಆರ್ಟ್ ಮತ್ತು ಕಲ್ಚರಲ್ ಟ್ರಸ್ಟ್ ನಾ ಅಧ್ಯಕ್ಷೆ ಲಕ್ಷಿತಾ ಗಂಗಾವತಿ.ಯುವ ಧುರೀಣ ರಾಜು ಕಂಕಣವಾಡಿ.ನ್ಯಾಯವಾದಿ ದಾನೇಶ್ ಅವಟಿ ಮುಂತಾದವರು ಉಪಸ್ಥಿತರಿದ್ದು ಪ್ರಶಸ್ತಿ ಪುರಸ್ಕೃತ ದಂಪತಿಗಳನ್ನು ಅಭಿನಂದಿಸಿದ್ದಾರೆ.

# ಒಳ ಮೀಸಲಾತಿ ಸಾಮಾಜಿಕ ನ್ಯಾಯ ಬಲಗೈ ಸಮಾಜಕ್ಕೂ ಸಿಗಬೇಕು




**ತಾಳಿಕೋಟೆ:ಮಾ.28:** ಒಳ ಮೀಸಲಾತಿ ಜಾರಿಯಾದಾಗ, ಎಡಗೈ ಸಮುದಾಯಕ್ಕೆ ಮೊದಲ ಆದ್ಯತೆ ನೀಡಿ, ಬಲಗೈ ಸಮುದಾಯದ ಬಿಂದುವನ್ನು 9ಕ್ಕೆ ತಳ್ಳಲಾಗಿದೆ. ಇದರ ಪರಿಣಾಮ ಬಲಗೈ ಸಮುದಾಯದ ಅಭ್ಯರ್ಥಿಗೆ ಅವಕಾಶವೇ ಸಿಗದಂತಾಗಿದೆ ಕೂಡಲೇ ಈ ರೋಸ್ಟರ್ ಸರಿಪಡಿಸುವ ಕಾರ್ಯವಾಗಬೇಕಾಗಿದೆ ಎಂದು ದಲಿತ ಯುವ ಮುಖಂಡ ಗುರುಪ್ರಸಾದ ಬಿ.ಜಿ. ಅವರು ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.
ಒಂದು ಗುಂಪಿಗೆ ಮೊದಲ ಬಿಂದು ನೀಡಿದರೆ, ಸಹಜವಾಗಿಯೇ ಇನ್ನೊಂದು ಗುಂಪು ಕಾಯಬೇಕಾಗುತ್ತದೆ. ರೋಸ್ಟರ್ ನ 9ನೇ ಬಿಂದು ಬಲಗೈ ಸಮುದಾಯದ ಪಾಲಿಗೆ ಶೂನ್ಯದ ಹಾದಿಯಾಗಿದೆ. ಮೀಸಲಾತಿಯ ಮೂಲ ಆಶಯವೇ ಸಮಾನ ಅವಕಾಶ ಹೊರತು ಸಮುದಾಯಗಳ ನಡುವಿನ ಸಂಘರ್ಷ ಅಲ್ಲ. ಹಕ್ಕಿಲ್ಲದವನಿಗೆ ಹಕ್ಕು ತಲುಪಿಸುವ ಪ್ರಕ್ರಿಯೆಯಲ್ಲಿ ಮತ್ತೊಬ್ಬನಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವುದು ನಿಜವಾದ ಸಾಮಾಜಿಕ ನ್ಯಾಯವಾಗಿದೆ ಯಾವುದಾದರೂ ಸರ್ಕಾರಿ ಇಲಾಖೆಯಲ್ಲಿ 8ಕ್ಕಿಂತ ಕಡಿಮೆ ಹುದ್ದೆಗಳು ಖಾಲಿ ಇದ್ದರೆ, ಅಲ್ಲಿ ಬಲಗೈ ಸಮುದಾಯದ ಅಭ್ಯರ್ಥಿಗೆ ಒಂದೇ ಒಂದು ಕೆಲಸವೂ ಸಿಗುವುದಿಲ್ಲ. ನಮ್ಮ ರಾಜ್ಯದ ಬಹುತೇಕ ಸಣ್ಣ ಇಲಾಖೆಗಳಲ್ಲಿ ನೇಮಕಾತಿ ನಡೆಯುವುದೇ 2, 4 ಅಥವಾ 5 ಹುದ್ದೆಗಳಿಗೆ. ಹೀಗಿರುವಾಗ 9ನೇ ಬಿಂದುವಿನ ವಂಚನೆಗೆ ಒಳಗಾದ ಸಮುದಾಯವು ದಶಕಗಳ ಕಾಲ ಕೇವಲ ವೇಟಿಂಗ್ ಲಿಸ್ಟ್ ನಲ್ಲೇ ಉಳಿಯಬೇಕಾಗುತ್ತದೆ. ಇದು ಒಳ ಮೀಸಲಾತಿಯೋ ಅಥವಾ ಒಳ ಸಂಚೋ ಎಂಬುದು ತಿಳಿಯದಂತಾಗಿದೆ ಮೀಸಲಾತಿ ಎಂಬುದು ಒಂದು ಸಮುದಾಯದ ಏಳಿಗೆಗಾಗಿ ಮತ್ತೊಂದು ಸಮುದಾಯದ ಹಕ್ಕನ್ನು ಕಸಿದುಕೊಳ್ಳುವ ಆಟವಾಗಬಾರದು. ಹಕ್ಕಿಲ್ಲದವನಿಗೆ ನೀಡುವ ಸಂಭ್ರಮದಲ್ಲಿ, ಈಗಾಗಲೇ ಅಲ್ಪಸ್ವಲ್ಪ ಅವಕಾಶ ಪಡೆದಿದ್ದಾರೆ ಎಂಬುದನ್ನು ಮುಂದಿಟ್ಟುಕೊಂಡ ಬೀದಿಗೆ ತಳ್ಳಬೇಡಿ. ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಜಾರಿಯಾಗುತ್ತಿರುವ ಹೊಸ ನಿಯಮಗಳು, ಒಂದು ಸಮುದಾಯಕ್ಕೆ ಹಕ್ಕು ನೀಡುವ ನೆಪದಲ್ಲಿ ಮತ್ತೊಂದು ಸಮುದಾಯವನ್ನು ವ್ಯವಸ್ಥಿತವಾಗಿ ಉದ್ಯೋಗ ಮಾರುಕಟ್ಟೆಯಿಂದ ಹೊರದಬ್ಬುತ್ತಿದೆ. ಒಳ ಮೀಸಲಾತಿ ಜಾರಿಯಾಗಲಿ, ಅದರಲ್ಲಿ ಎರಡು ಮಾತಿಲ್ಲ. ರೋಸ್ಟರ್ ಬಿಂದುವಿನ ಹೆಸರಿನಲ್ಲಿ ಒಂದು ಸಮುದಾಯವನ್ನು ವ್ಯವಸ್ಥಿತವಾಗಿ ಹೊರಗಿಡುವುದು ಸಾಮಾಜಿಕ ನ್ಯಾಯದ ಕೊಲೆಗೆ ಸಮ. ಒಳ ಮೀಸಲಾತಿ ಎಂಬುದು ಶೋಷಿತರ ಹಕ್ಕಾಗಲಿ ಹೊರತು, ಹೊಸದೊಂದು ಶೋಷಣೆಗೆ ನಾಂದಿಯಾಗಬಾರದು. ಎಲ್ಲರಿಗೂ ಹಕ್ಕುಗಳನ್ನು ಹಂಚುವ ಮೂಲಕ ಸಮಾನತೆಯ ಪವಿತ್ರ ಆಶಯವನ್ನು ಎತ್ತಿಹಿಡಿಯಲು ಸರ್ಕಾರವು ಮುಂದಾಗಬೇಕೆಂದು ದಲಿತ ಯುವ ಮುಖಂಡ ಗುರುಪ್ರಸಾದ ಬಿ.ಜಿ. ಅವರು ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

# ಮಾ. 31: ಅರಸೀಕೆರೆಗೆ ಶೃಂಗೇರಿ ಶ್ರೀಗಳ ಭೇಟಿ

**ಅರಸೀಕೆರೆ, ಮಾ. 28–** ಶೃಂಗೇರಿ ಶಾರದ ಪೀಠದ ಜಗದ್ಗುರುಗಳಾದ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಯವರು ಮಾ. 31 ರಂದು ಅರಸೀಕೆರೆ ನಗರಕ್ಕೆ ಆಗಮಿಸಲಿದ್ದಾರೆ ಎಂದು ಭಕ್ತವೃಂದ ತಿಳಿಸಿದೆ.

ಇಲ್ಲಿನ ಮಾರುತಿ ನಗರ ಬಡಾವಣೆಯಲ್ಲಿರುವ ಶ್ರೀ ಶಂಕರಲಿಂಗ ಆಶ್ರಮಕ್ಕೆ ಆಗಮಿಸುವ ಶ್ರೀಯವರು ಮಧ್ಯಾಹ್ನ 12 ಘಂಟೆಗೆ ಭಕ್ತಾಧಿಗಳಿಗೆ ಫಲಮಂತ್ರಾಕ್ಷತೆ ಅನುಗ್ರಹಿಸಲಿದ್ದು, ರಾತ್ರಿ 8 ಗಂಟೆ ಶ್ರೀಯವರ ಸಾನಿಧ್ಯದಲ್ಲಿ ಶ್ರೀ ಚ0ದ್ರಮೌಳೀಶ್ವರ ಪೂಜೆ ನೆರವೇರಲಿದೆ. ಈ ಎಲ್ಲ ಧಾರ್ಮಿಕ ಕಾರ್ಯಕ್ರಮಗಳಿಗೆ ಎಲ್ಲಾ ಭಕ್ತರು ಕುಟುಂಬ ಸಮೇತರಾಗಿ ಆಗಮಿಸಿ ಗುರುಗಳ ಆಶೀರ್ವಾದಕ್ಕೆ ಪಾತ್ರರಾಗಬೇಕು ಎಂದು ಪ್ರಕಟಣೆಯಲ್ಲಿ ಕೋರಲಾಗಿದೆ.



# ಬೆಂಗಳೂರು : ಕುತ್ತಿಗೆ ಬಿಗಿದು 6 ವರ್ಷದ ಬಾಲಕಿ ಕೊಲೆ

**ಬೆಂಗಳೂರು,ಮಾ.28–** ಆರು ವರ್ಷದ ಬಾಲಕಿಯ ಕುತ್ತಿಗೆ ಬಿಗಿದು ಕೊಲೆಮಾಡಿ ನೀಲಗಿರಿ ತೋಪಿನಲ್ಲಿ ಬಿಸಾಡಿ ದುಷ್ಕರ್ಮಿಗಳು ಪರಾರಿಯಾಗಿರುವ ಘಟನೆ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.ಅಸ್ಸಾಂ ಮೂಲದ ರಫೀಕ್‌ಉಲ್ಲಾ ಎಂಬುವವರ ಮಗಳು ರಿವಿಯಾ (6) ಕೊಲೆಯಾದ ಬಾಲಕಿ. ಬೇಗೂರಿನಲ್ಲಿ ಈ ಕುಟುಂಬ ವಾಸವಿದೆ. ರಫೀಕ್ ಅವರು ಚಿಂದಿ ಆಯುವುದು ಹಾಗೂ ಅಪಾರ್ಟ್‌ಮೆಂಟ್‌ನಲ್ಲಿ ಸ್ವಚ್ಛತಾ ಕೆಲಸ ಮಾಡಿಕೊಂಡಿದ್ದಾರೆ.ಮೊನ್ನೆ ರಾತ್ರಿ ಇವರ ಮಗಳು ರಿವಿಯಾ ಕಾಣೆಯಾಗಿದ್ದಾಳೆ. ಪೋಷಕರು ಎಲ್ಲಾ ಕಡೆ ಹುಡುಕಾಡಿದರೂ ಬಾಲಕಿ ಪತ್ತೆಯಾಗಿಲ್ಲ. ಹಾಗಾಗಿ ಎಲೆಕ್ಟ್ರಾನಿಕ್ ಸಿಟಿ ಠಾಣೆ ಪೊಲೀಸರಿಗೆ ನಿನ್ನೆ ಮಧ್ಯಾಹ್ನ ದೂರು ನೀಡಿದ್ದಾರೆ.ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಬಾಲಕಿಗಾಗಿ ಹುಡುಕಾಟ ನಡೆಸುತ್ತಿದ್ದಾಗ ರಾತ್ರಿ ಬಾಲಕಿಯ ಶವ ವಿಟ್ಟಗಾನ ಹಳ್ಳಿಯ ನೀಲಗಿರಿ ತೋಪಿನಲ್ಲಿ ಕೊಲೆಯಾದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾಳೆ.

ದುಷ್ಕರ್ಮಿಗಳು ಬಾಲಕಿಯನ್ನು ಅಪಹರಿಸಿ ಕುತ್ತಿಗೆ ಬಿಗಿದು ಕೊಲೆ ಮಾಡಿ ಶವವನ್ನು ತೋಪಿನಲ್ಲಿ ಬಿಸಾಕಿ ಹೋಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.ಯಾವುದೋ ದ್ವೇಷದಿಂದ ಈ ಕೊಲೆ ನಡೆದಿರಬಹುದು ಎಂದು ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ.ಮೃತದೇಹವನ್ನು ಸೆಂಟ್‌ಜಾನ್ ಆಸ್ಪತ್ರೆಗೆ ರವಾನಿಸಿ ಪ್ರಕರಣ ದಾಖಲಿಸಿಕೊಂಡು ದುಷ್ಕರ್ಮಿಗಳ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.ಬಾಲಕಿಯನ್ನು ಯಾವ ಕಾರಣಕ್ಕಾಗಿ ಯಾರು ಕೊಲೆ ಮಾಡಿದ್ದಾರೆಂಬುವುದು ತನಿಖೆಯಿಂದಷ್ಟೆ ಗೊತ್ತಾಗಲಿದೆ.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE